ಓಂ ಶಾಂತಿ, ಬಾಪ್‌ದಾದಾ  , ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 28-03-2002.

# *ಈ ವರ್ಷವನ್ನು ನಿರ್ಮಾಣ, ನಿರ್ಮಲ ವರ್ಷ ಮತ್ತು ವ್ಯರ್ಥದಿಂದ ಮುಕ್ತರಾಗುವ ಮುಕ್ತಿ ವರ್ಷವನ್ನಾಗಿ ಆಚರಿಸಿ.*

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾ ತನ್ನ ನಾಲ್ಕೂ ಕಡೆಯ ಮಕ್ಕಳ ಮಸ್ತಕದಲ್ಲಿ ಹೊಳೆಯುತ್ತಿರುವ ಮೂರು ರೇಖೆಗಳನ್ನು ನೋಡುತ್ತಿದ್ದಾರೆ. ಮೊದಲನೆಯ ರೇಖೆ ಪ್ರಭುವಿನ ಪಾಲನೆಯ ರೇಖೆಯಾಗಿದೆ ಎರಡನೆಯ ರೇಖೆ ಶ್ರೇಷ್ಠ ವಿದ್ಯಾ - ರೇಖೆ ಹಾಗೂ ಮೂರನೆಯ ರೇಖೆ ಶ್ರೇಷ್ಠ ಮತದ ರೇಖೆಯಾಗಿದೆ. ಈ ರೀತಿ ಮೂರು ರೇಖೆಗಳು ಹೊಳೆಯುತ್ತಿವೆ. ಈ ಮೂರು ರೇಖೆಗಳು ಸರ್ವರ ಭಾಗ್ಯದ ರೇಖೆಗಳಾಗಿವೆ. ನೀವು ಎಲ್ಲರೂ ಸಹ ತಮ್ಮ ಮೂರು ರೇಖೆಗಳನ್ನು ನೋಡಿಕೊಳ್ಳುತ್ತಿದ್ದೀರಲ್ಲವೇ! ಪ್ರಭು ಪಾಲನೆಯ ಭಾಗ್ಯ ಬ್ರಾಹ್ಮಣ ಅತ್ಮರಾದ ನಿಮ್ಮ ವಿನಃ ಮತ್ತೆ ಯಾರಿಗೂ ಸಹ ಪ್ರಾಪ್ತಿಯಾಗುವುದಿಲ್ಲ. ಪರಮಾತ್ಮ ಪಾಲನೆ..! ಈ ಪಾಲನೆಯಿಂದ ಎಷ್ಟೊಂದು ಶ್ರೇಷ್ಠ ಪೂಜ್ಯನೀಯರಾಗುತ್ತೀರಿ. ಅತ್ಮನಾದ ನನಗೆ ಪರಮಾತ್ಮ ವಿದ್ಯೆಯ ಅಧಿಕಾರವು ಪ್ರಾಪ್ತಿಯಾಗುವುದೆಂದು ಎಂದಾದರೂ ಸ್ವಪ್ನದಲ್ಲಾದರೂ ಯೋಚಿಸಿದ್ದೀರೇ! ಆದರೆ ಈಗ ಅದನ್ನು ಸಾಕಾರದಲ್ಲಿ ಅನುಭವ ಮಾಡುತ್ತಿದ್ದೀರಿ, ಸ್ವಯಂ ಸದ್ಗುರು ಅಮೃತವೇಳೆಯಿಂದ ರಾತ್ರಿಯ ತನಕ ಪ್ರತಿಯೊಂದು ಕರ್ಮದ ಸಲುವಾಗಿ ಶ್ರೇಷ್ಠ ಮತವನ್ನು ಕೊಟ್ಟು ಕರ್ಮಬಂಧನವನ್ನು ಕರ್ಮ

ಸಂಬಂಧದಲ್ಲಿ ಪರಿವರ್ತನೆ ಮಾಡುವ ಶ್ರೀಮತವನ್ನು ನೀಡಲು ನಿಮಿತ್ತ ಮಾಡುವವರೆಂದು ಎಂದು ಸಹ ಸ್ವಪ್ನದಲ್ಲಿಯೂ ಇರಲಿಲ್ಲ. ಆದರೆ ಈಗ ನಮ್ಮ ಪ್ರತಿಯೊಂದು ಕರ್ಮ ಶ್ರೀಮತದಂತೆ ನಡೆಯುತ್ತಿದೆಯೆಂದು ಅನುಭವದಿಂದ ಹೇಳುತ್ತೀರಿ. ಇಂತಹ ಅನುಭವವಿದೆಯೇ? ಇಂತಹ ಶ್ರೇಷ್ಠ ಭಾಗ್ಯವನ್ನು ಪ್ರತಿಯೊಂದು ಮಗುವಿನಲ್ಲಿ ಬಾಪ್‌ದಾದಾರವರೂ ಸಹ ನೋಡಿ ಹರ್ಷಿತರಾಗುತ್ತಿದ್ದಾರೆ. ವಾಹ್ ನನ್ನ ಶ್ರೇಷ್ಠ ಭಾಗ್ಯವಂತ ಮಕ್ಕಳೇ ವಾಹ್! ಎಂದು ಬಾಪ್‌ದಾದಾ ಹೇಳುತ್ತಾರೆ. ವಾಹ್! ಬಾಬಾ ವಾಹ್! ಎಂದು ಮಕ್ಕಳು ಹೇಳುತ್ತಿದ್ದಾರೆ ಮತ್ತು ತಂದೆ ಹೇಳುತ್ತಾರೆ ವಾಹ್! ಮಕ್ಕಳೇ ವಾಹ್!

ಇಂದು ಅಮೃತವೇಳೆಯಿಂದ ಎರಡು ಸಂಕಲ್ಪಗಳಿಂದ ಮಕ್ಕಳ ನೆನಪು ಬಾಪ್‌ದಾದಾರವರ ಬಳಿ ತಲುಪಿತು. ಮೊದಲನೆಯದಾಗಿ ಕೆಲವು ಮಕ್ಕಳಿಗೆ ಚಾರ್ಟ್ ಒಪ್ಪಿಸುವ ನೆನಪಿತ್ತು. ಎರಡನೆಯದಾಗಿ ತಂದೆಯ ಸಂಗದ ರಂಗಿನ ಹೋಳಿಯ ನೆನಪಿತ್ತು. ಎಲ್ಲರೂ ಹೋಳಿಯನ್ನು ಆಚರಿಸಲು ಬಂದಿದ್ದೀರಲ್ಲವೇ ಬ್ರಾಹ್ಮಣರ ಭಾಷೆಯಲ್ಲಿ ಆಚರಿಸುವುದು ಅರ್ಥಾತ್ ಆಚರಣೆಯಂತೆ ತಯಾರಾಗುವುದಾಗಿದೆ. ಹೋಳಿಯನ್ನು ಆಚರಿಸುವುದು ಅರ್ಥಾತ್ ಹೋಲಿ(ಪವಿತ್ರ)ಆಗುವುದಾಗಿದೆ. ಬ್ರಾಹ್ಮಣ ಮಕ್ಕಳು ಪರಮಪವಿತ್ರರಾಗುವುದು ಸರ್ವರಿಂದ ಅತೀತ ಹಾಗೂ ಪ್ರಿಯಾವಾಗಿರುವುದನ್ನು ಬಾಪ್‌ದಾದಾ ನೋಡುತ್ತಿದ್ದಾರೆ. ಹಾಗೆ ನೋಡುವುದಾದರೆ ದ್ವಾಪರದ ಆದಿಯ ಮಹಾನ್ ಆತ್ಮರು ಮತ್ತು ಸಮಯ ಪ್ರತಿ ಸಮಯ ಬಂದಿರುವಂತಹ ಧರ್ಮ ಪಿತರೂ ಸಹ ಪವಿತ್ರವಾಗಿದ್ದಾರೆ. ಆದರೆ ನಿಮ್ಮ ಪವಿತ್ರತೆ ಎಲ್ಲರಿಗಿಂತ ಶ್ರೇಷ್ಠವಾಗಿದೆ ಹಾಗೂ ಅತೀತವಾಗಿದೆ. ಇಡೀ ಕಲ್ಪದಲ್ಲಿ ಯಾವುದೇ ಮಹಾನ್ ಆತ್ಮ, ಧರ್ಮಾತ್ಮ, ಧರ್ಮ ಪಿತರಾಗಿರಬಹುದು ಆದರೆ ನಿಮ್ಮ ಅತ್ಮ ಶರೀರ ಹಾಗೂ ಪ್ರಕೃತಿಯೂ ಸಹ ಪವಿತ್ರವಾಗಿದೆ. ಇಂತಹ ಪರಮಪವಿತ್ರವಾಗಿ ಇದುವರೆಗೂ ಯಾರೂ ಸಹ ಆಗಿಲ್ಲ. ಹಾಗೂ ಆಗಲೂ ಸಾಧ್ಯವಿಲ್ಲ. ತಮ್ಮ ಭವಿಷ್ಯ ಸ್ವರೂಪವನ್ನು ಮುಂದೆ ತಂದುಕೊಳ್ಳಿ ತಂದುಕೊಂಡಿರಾ? ಎಲ್ಲರ ಮುಂದೆ ತಮ್ಮ ಭವಿಷ್ಯ ರೂಪ ಬಂದಿತೇ। ಆಗುತ್ತೇನೆಯೋ ಅಥವಾ ಇಲ್ಲವೋ ಎಂದು ತಮ್ಮ ಭವಿಷ್ಯ ರೂಪ ಗೊತ್ತಿಲ್ಲವೇ? ಏನಾಗುತ್ತೇನೆಯೋ! ಏನೇ ಆದರೂ ಸಹ ಪವಿತ್ರರಲ್ಲವೇ? ಶರೀರವೂ ಸಹ ಪವಿತ್ರ, ಅತ್ಮವೂ ಸಹ ಪವಿತ್ರ, ಪಾವನ, ಸುಖದಾಯಿ..

ನಿಮ್ಮ ನಿಶ್ಚಯದ ಲೇಖನಿಯಿಂದ ಭವಿಷ್ಯದ ಚಿತ್ರವನ್ನು ಮುಂದೆ ತರಲು ಸಾಧ್ಯವಿದೆಯೇ. ನಿಶ್ಚಯವಿದೆಯೇ! ಶಿಕ್ಷಕಿಯರಿಗೆ ನಿಶ್ಚಯವಿದೆಯೇ? ಒಳ್ಳೆಯದು. ಒಂದು ಸೆಕೆಂಡಿನಲ್ಲಿ ತಮ್ಮ ಭವಿಷ್ಯ ಚಿತ್ರವನ್ನು ಮುಂದೆ ತರಲು ಸಾಧ್ಯವಿದೆಯೇ! ಒಂದುವೇಳೆ ಕೃಷ್ಣನಂತೂ ಆಗದಿರಬಹುದು. ಆದರೆ ಕೃಷ್ಣನ ಜೊತೆಗಾರರಂತೂ ಆಗುತ್ತೀರಲ್ಲವೇ! ಜೊತೆಗಾರರಾಗುವುದೂ ಸಹ ಎಷ್ಟೊಂದು ಚೆನ್ನಾಗಿರುತ್ತದೆ. ಆದರೆ ಚಿತ್ರಕಾರರಾಗಲು ಬರುತ್ತದೆಯೋ ಅಥವಾ ಇಲ್ಲವೋ? ಕೇವಲ ನಿಮ್ಮ ಮುಂದೆ ನಿಮ್ಮನ್ನು ನೋಡಿಕೊಳ್ಳಿ. ಈಗಂತು ಸಾಧಾರಣನಾಗಿದ್ದೇನೆ. ನಾಳೆ (ಡ್ರಾಮಾದ ನಾಳೆ) ಪವಿತ್ರ ಶರೀರಧಾರಿಯಾಗಲೇ ಬೇಕಾಗಿದೆ. ಪಾಂಡವರು ಏನೆಂದು ಭಾವಿಸುತ್ತೀರಿ? ಪಕ್ಕಾ ಅಲ್ಲವೇ. ಗೊತ್ತಿಲ್ಲ ಆಗುತ್ತೇನೆಯೋ ಇಲ್ಲವೋ?ಎಂಬ ಸಂಶಯವಂತು ಇಲ್ಲ ತಾನೆ! ಸಂಶಯವೇ? ಇಲ್ಲವಲ್ಲವೇ! ಪಕ್ಕಾ ಅಲ್ಲವೇ? ರಾಜಯೋಗಿ ಆಗಿರುವಿರೆಂದಾಗ ರಾಜ್ಯಾಧಿಕಾರಿಗಳಾಗಲೇ ಬೇಕಾಗಿದೆ. ಬಾಪ್‌ದಾದಾ ಅನೇಕ ಸಲ ಸ್ಮೃತಿಯನ್ನು ತರಿಸುತ್ತಾರೆ...! ತಂದೆ ನಿಮಗಾಗಿ ಉಡುಗೊರೆಯನ್ನು ತಂದಿದ್ದೇವೆ. ಹಾಗಾದರೆ ಯಾವ ಉಡುಗೊರೆಯನ್ನು ತಂದಿದ್ದೇವೆ? ಸ್ವರ್ಣಿಮ ಪ್ರಪಂಚ, ಸತೋಪ್ರಧಾನ ಜಗತ್ತಿನ ಉಡುಗೊರೆಯನ್ನು ತಂದಿದ್ದಾರೆ. ಈ ನಿಶ್ಚಯವಿದೆಯೇ!

ನಿಶ್ಚಯದ ಗುರುತು ಆತ್ಮಿಕ ನಶೆಯಲ್ಲಿರುವುದಾಗಿದೆ. ಎಷ್ಟೆಷ್ಟು ನಿಮ್ಮ ರಾಜ್ಯದ, ಮನೆಯ ಹಾಗೂ ತಮ್ಮ ರಾಜ್ಯದ ಸಮೀಪ ಬರುತ್ತೀರೋ ಆಗ ನಿಮಗೆ ಮತ್ತೆ-ಮತ್ತೆ ನಿಮ್ಮ ಮಧುರ ಮನೆಯ ಮತ್ತು ಮಧುರ ರಾಜ್ಯದ ಸ್ಮೃತಿ ಸ್ಪಷ್ಟವಾಗಿ ಬರಲೇ ಬೇಕಾಗುತ್ತದೆ. ಇದು ಸಮಯ ಸಮೀಪ ಬರುವುದರ ಚಿಹ್ನೆಯಾಗಿದೆ. ಹೀಗೆ ನಿಮ್ಮ ಮನೆ. ನಿಮ್ಮ ರಾಜ್ಯ ಸ್ಪಷ್ಟವಾಗಿ ಸ್ಮೃತಿಗೆ ಬರಬೇಕು. ಮೂರನೆಯ ನೇತ್ರದ ಮುಖಾಂತರ ಸ್ಪಷ್ಟವಾಗಿ ಕಾಣಿಸಬೇಕು. ಇಂದು ಬ್ರಾಹ್ಮಣರು, ನಾಳೆ ದೇವತೆಗಳೆಂದು ಅನುಭವವಾಗಬೇಕು. ಎಷ್ಟು ಬಾರಿ ಪಾತ್ರವನ್ನು ಪೂರ್ಣಗೊಳಿಸಿ ತಮ್ಮ ಮನೆ ಮತ್ತು ತಮ್ಮ ರಾಜ್ಯದಲ್ಲಿ ಹೋಗಿದ್ದೀರೆಂದು ನೆನಪಿಗೆ ಬರುತ್ತದೆಯೇ? ಪುನಃ ಈಗ ಹೋಗಬೇಕಾಗಿದೆ.

ಡಬಲ್ ವಿದೇಶಿಯರಿಗೆ ಸ್ಪಷ್ಟವಾಗಿ ಸ್ಮೃತಿ ಬರುತ್ತದೆಯೇ ಅಥವಾ ಏನಾಗುವೆವೋ ತಿಳಿಯುವುದಿಲ್ಲ, ಹೇಗಾಗುತ್ತದೆಯೋ ತಿಳಿಯುವುದಿಲ್ಲ ಎನ್ನುತ್ತಿದ್ದೀರಾ? ಸ್ಮೃತಿ ಇದೆಯೇ, ಹಿಂದೆ ಕುಳಿತಿರುವವರಿಗೆ ಸ್ಮೃತಿ ಇದೆಯೇ? ಗ್ಯಾಲರಿಯಲ್ಲಿ ಕುಳಿತಿರುವವರಿಗೆ ಸ್ಮೃತಿ ಇದೆಯೇ? ಹೊರಗೆ ಸಹ ಕುಳಿತುಕೊಳ್ಳುತ್ತಿದ್ದಾರೆ ಮತ್ತು ವಿಶ್ವದ ಕೋಣೆ ಕೋಣೆಯಲ್ಲಿಯೂ ಕುಳಿತುಕೊಂಡಿದ್ದಾರೆ. ಹೋಲಿಯನ್ನು ಆಚರಿಸಿಕೊಂಡಿದ್ದೀರಾ? ನೀವು ಇರುವುದೇ ಹೋಲಿ(ಪವಿತ್ರವಾಗಿ), ಇನ್ನು ಯಾವ ಹೋಲಿಯನ್ನು ಆಚರಿಸಿಕೊಳ್ಳುತ್ತೀರಿ. ಪವಿತ್ರತೆ ಎಂಬುದು ಸಂಗಮಯುಗದ ಅಲಂಕರಣೆ ಇನ್ನೇನು ಹೋಲಿಯನ್ನು ಆಚರಿಸಿಕೊಳ್ಳುತ್ತೀರಿ. ಬಾಪ್‍ದಾದಾ ಇಂದು ಎಲ್ಲರ ಅಕೌಂಟನ್ನು(ಖಾತೆ) ನೋಡಬೇಕಲ್ಲವೇ? ಬಾಬಾ ಮರೆತಿಲ್ಲ. ಎಲ್ಲರೂ ತಮ್ಮ ಅಕೌಂಟನ್ನು ಇಟ್ಟುಕೊಂಡಿದ್ದಾರೆ. ಯಾರಾದರೆ ತಮ್ಮ ಯಥಾರ್ಥವಾದ ಅಕೌಂಟ್ ಅರ್ಥಾತ್ ನಿಯಮ ಪ್ರಮಾಣವಾಗಿ ಕೆಲಸವಾಯಿತು ಎಂಬಂತೆ ಅಲ್ಲದೆ, ಯಥಾರ್ಥವಾಗಿ ಹೇಗಿದ್ದರೂ ಯಥಾರ್ಥ ರೂಪದಿಂದ ಯಾರಾದರೆ ತಮ್ಮ ಸತ್ಯವಾದ ಅಕೌಂಟನ್ನು ಇಟ್ಟಿದ್ದಾರೆಯೋ ಅವರು ಕೈಯನ್ನು ಎತ್ತಿರಿ. ಬರೆಯಲಿಲ್ಲ ಆದರೆ ಯಾರಾದರೆ ಇಟ್ಟುಕೊಂಡಿದ್ದೀರೋ ಅವರು ಕೈಯನ್ನು ಎತ್ತಿರಿ. ಹಿಂದೆ ಕುಳಿತಿರುವವರಲ್ಲಿ ಯಾರಾದರೆ ಇಟ್ಟುಕೊಂಡಿದ್ದೀರೋ ಅವರು ಕೈಯನ್ನು ಎತ್ತಿರಿ. ಕೆಲವು ಜನ ಅಕೌಂಟನ್ನು ಇಟ್ಟುಕೊಂಡಿದ್ದಾರೆ. ಡಬಲ್ ವಿದೇಶೀಯರು ಯಾರಾದರೆ ಅಕೌಂಟನ್ನು ಇಟ್ಟುಕೊಂಡಿದ್ದೀರೋ ಅವರು ಎದ್ದು ನಿಲ್ಲಿರಿ. ಒಳ್ಳೆಯದು. ಶುಭಾಶಯಗಳು, ಕುಳಿತುಕೊಳ್ಳಿ. ಒಳ್ಳೆಯದು. ಯಾರಾದರೆ ಅಕೌಂಟನ್ನು ಇಟ್ಟುಕೊಂಡಿಲ್ಲವೋ ಅವರಿಗೆ ಕೈಯನ್ನು ಎತ್ತಲು ಹೇಳುತ್ತಿಲ್ಲ ಹಾಗೆ ಕೈಯನ್ನು ಎತ್ತಲು ಹೇಳುವುದು ಚೆನ್ನಾಗಿರುವುದಿಲ್ಲ ತಾನೆ! ಆದರೆ ಅಕೌಂಟ್ ಇಟ್ಟವರೆಲ್ಲರದ್ದು ಬಾಪ್‍ದಾದಾರವರ ಮುಂದೆ ಸ್ಪಷ್ಟವಾಗುತ್ತಾ ಇರುತ್ತದೆ. ಆದರೆ ಕೆಲವರು ಸತ್ಯವಾಗಿ ಮತ್ತು ಕೆಲವರು ಮಧ್ಯಮವಾಗಿ(ಆವರೇಜ್) ಆಗಿ ಕೂಡ ಅಕೌಂಟನ್ನು ಇಟ್ಟುಕೊಂಡಿದ್ದಾರೆ. ಯಥಾರ್ಥವಾಗಿ ಕೆಲವರೇ ಬರೆದಿದ್ದಾರೆ ಮತ್ತು ಇಟ್ಟುಕೊಂಡಿದ್ದಾರೆ. ಆದರೂ ಬಾಪ್‍ದಾದಾರವರ ಆಜ್ಞೆಯನ್ನು ಅಂಗೀಕರಿಸಿದ ಸಲುವಾಗಿ ಬಾಪ್‍ದಾದಾ ಅವರಿಗೆ ಎರಡು ವಿಧವಾಗಿ ಎಕ್ಸ್ಟ್ರಾ ಮಾರ್ಕ್ಸ್ ಅನ್ನು ಕೊಡುತ್ತಾರೆ. ಏಕೆಂದರೆ ಶ್ರೀಮತದ ಮೇಲೆ ನಡೆಯುವುದೂ ಸಹ ಒಂದು ಸಬ್ಜೆಕ್ಟ್ ಆದ್ದರಿಂದ ಶ್ರೀಮತದ ಮೇಲೆ ನಡೆಯುವ ಸಬ್ಜೆಕ್ಟ್ ನಲ್ಲಿ ಪಾಸ್ ಆಗಿದ್ದಾರೆ. ಆದ್ದರಿಂದ ಫಸ್ಟ್ ನಂಬರ್ ನವರಿಗೆ ಬಾಪ್‍ದಾದಾರವರ ಕಡೆಯಿಂದ 25 ಅಂಕಗಳನ್ನು ಹೆಚ್ಚಿಸಿದ್ದಾರೆ ಮತ್ತು ಎರಡನೇಯವರಿಗೆ 15 ಅಂಕಗಳನ್ನು ಹೆಚ್ಚಿಸಿದ್ದಾರೆ. ಈಗ ಎಕ್ಸ್ಟ್ರಾ ಲಿಫ್ಟನ್ನು ಬಾಪ್‍ದಾದಾ ತನ್ನ ಕಡೆಯಿಂದ ಕೊಟ್ಟಿದ್ದಾರೆ ಮತ್ತು ಅಂತಿಮ ಪೇಪರ್ ನಲ್ಲಿ ನಿಮ್ಮ ಈ ಅಂಕಗಳು ಜಮಾ ಆಗುತ್ತವೆ. ಪಾಸ್ ವಿತ್ ಆನರ್ ಆಗುವುದರಲ್ಲಿ ಸಹಾಯವು ಲಭಿಸುತ್ತದೆ. ಆದರೆ ಯಾರಾದರೆ ಅಕೌಂಟನ್ನು ಇಟ್ಟುಕೊಳ್ಳಲಿಲ್ಲವೋ ಯಾವುದೋ ಒಂದು ಕಾರಣದಿಂದ, ಸೋಮಾರಿತನವೇ ಅಷ್ಟಕ್ಕಿಂತ ಬೇರೆ ಏನೂ ಇಲ್ಲ ಆದರೆ ಯಾವುದೋ ಒಂದು

ಕಾರಣದಿಂದ ಇಟ್ಟುಕೊಳ್ಳಲಿಲ್ಲವೋ ಅವರಿಗೆ ಬಾಪ್‌ದಾದಾ ಹೇಳುತ್ತಿದ್ದಾರೆ ಈಗಿನಿಂದ ನೀವು ಒಂದು ತಿಂಗಳಿನ ಅಕೌಂಟನ್ನು ಇಟ್ಟುಕೊಳ್ಳಿರಿ. ಯಾವಾಗಲಾದರೂ ಆಗಲಿ ಒಂದು ತಿಂಗಳ ಯಥಾರ್ಥ ಅಕೌಂಟನ್ನು ಇಟ್ಟು ನಂಬರ್ ಒನ್ ಆದರೆ ಬಾಪ್‌ದಾದಾ ಅವರ ಅಂಕಗಳನ್ನು ಕಟ್ ಮಾಡುವುದಿಲ್ಲ. ತಿಳಿಯಿತೇ.ಕಟ್ ಮಾಡುವುದಿಲ್ಲ ಆದರೆ ತಪ್ಪದೇ ಮಾಡಬೇಕು. ಶ್ರೀಮತಕ್ಕೆ ಗೌರವ ಕೊಡದಿದ್ದರೆ ಅಂಕಗಳು ಕಟ್ ಆಗಿಬಿಡುತ್ತವೆಯಲ್ಲವೇ *ಅಂತಿಮದಲ್ಲಿ ಯಾರಾದರೆ ನಿಮ್ಮ ಖಾತೆಯನ್ನು ಡ್ರಾಮಾನುಸಾರ ನಿಮ್ಮ ಮನಸ್ಸಿನ ಟಿ.ವಿಯಲ್ಲಿ ನೋಡುತ್ತೀರೋ, ಬೇರೆ ಟಿವಿ ಇರುವುದಿಲ್ಲ ನಿಮ್ಮ ಮನಸ್ಸು ಎಂಬ ಟಿ.ವಿಯಲ್ಲಿಯೇ ಬಾಪ್‌ದಾದಾ ತೋರಿಸುತ್ತಾರೆ. ಅದರಲ್ಲಿ ಈ ಶ್ರೀಮತವೆಂಬ ಸಬ್ಜೆಕ್ಟ್ ನಲ್ಲಿ ಅಂಕಗಳನ್ನು ಕಟ್ ಮಾಡುವುದಿಲ್ಲ ಆದರೂ ಸಹ ಬಾಪ್‌ದಾದಾರವರಿಗೆ ಪ್ರೀತಿ ಇರುತ್ತದೆ. ಬಹಳ ಜನ್ಮಗಳ ಸೋಮಾರಿತನದ ಸಂಸ್ಕಾರವು ಪಕ್ಕಾ ಆಗಿದೆಯಲ್ಲವೇ ಆದ್ದರಿಂದ ಹಾಗೆ ಆಗಿಬಿಡುತ್ತದೆ ಎಂದುಕೊಳ್ಳುತ್ತಾರೆ. ಆದರೆ ಈಗ ಸೋಮಾರಿಯಾಗಬಾರದು ಇಲ್ಲದಿದ್ದರೆ ಏನಾಗುತ್ತದೆಯೋ ನಂತರ ಹೇಳುತ್ತೇನೆ. ಈಗ ಹೇಳುತ್ತಿಲ್ಲ ಏಕೆಂದರೆ ಬಾಪ್‌ದಾದಾ ಈಗ ಎಲ್ಲರ ವರ್ತಮಾನದ ಫಲಿತಾಂಶವನ್ನು ನೋಡಿದರು. ಭಾರತ ವಾಸಿಯರಾದರೂ ಎಲ್ಲರಲ್ಲಿ ಈಗಿನ ಫಲಿತಾಂಶದಲ್ಲಿ ವರ್ತಮಾನ ಸಮಯದಲ್ಲಿ ಸೋಮಾರಿತನ ಎಂಬುದು ಬಹಳ ವಿಧವಾಗಿ ಮಕ್ಕಳಲ್ಲಿ ಇದೆ. ಅನೇಕ ವಿಧಗಳಲ್ಲಿ ಇದೆ. ಮನಸ್ಸಿನಲ್ಲಿ, ಮನಸ್ಸಿನಲ್ಲಿಯೇ ಇವೆಲ್ಲವೂ ಆಗುತ್ತವೆ ಎಂದು ಯೋಚಿಸುತ್ತಾರೆ. ಇಂದಿನ ದಿನಗಳಲ್ಲಿ ಎಲ್ಲಾ ವಿಷಯಗಳ ಬಗ್ಗೆ ಇದೇ ಸ್ಲೋಗನ್ ವಿಶೇಷವಾಗಿ ನಡೆಯುತ್ತಿದೆ. ಇದೇ ಸೋಮಾರಿತನದ ಜೊತೆ ಜೊತೆ ಪುರುಷಾರ್ಥದಲ್ಲಿ ಅಥವಾ ಸ್ವಯಂ ಪರಿವರ್ತನೆಯಲ್ಲಿ ಸೋಮಾರಿತನದೊಂದಿಗೆ ಸ್ವಲ್ಪ ಪ್ರತಿಶತ ನಿರ್ಲಕ್ಷ್ಯವೂ ಇದೆ. ಆಗಿಬಿಡುತ್ತದೆ, ಮಾಡಿಬಿಡುತ್ತೇವೆ.... ಹೀಗೆ ಹೊಸ ವಿಧವಾದ ಸೋಮಾರಿತನದ ವಿಷಯಗಳನ್ನು ಬಾಪ್‌ದಾದಾ ನೋಡಿದರು. ಆದ್ದರಿಂದಲೇ ನಿಮ್ಮ ಸತ್ಯವಾದ ಮನಸ್ಸಿನಿಂದ ಚಾರ್ಟನ್ನು ಇಟ್ಟುಕೊಳ್ಳಿರಿ. ಸೋಮಾರಿತನದಿಂದ ಅಲ್ಲ.

ಇದು ಈ ಸೀಸನ್‌ನ ಲಾಸ್ಟ್ ಟರ್ನ್ ಆಗಿದೆಯಲ್ಲವೇ! ಆದ್ದರಿಂದ ಬಾಪ್‌ದಾದಾ ಫಲಿತಾಂಶವನ್ನು ಹೇಳುತ್ತಿದ್ದಾರೆ. ಹೇಳಬೇಕಲ್ಲವೇ! ಅಥವಾ ಕೇವಲ ಪ್ರೀತಿ ಮಾಡಬೇಕೇ? ಇದೂ ಸಹ ಪ್ರೀತಿಯಾಗಿದೆ. ಎಲ್ಲಾ ಮಕ್ಕಳೊಂದಿಗೆ ಬಾಪ್‌ದಾದಾರವರಿಗೆ ಎಷ್ಟೊಂದು ಪ್ರೀತಿ ಇದೆ. ಎಲ್ಲಾ ಮಕ್ಕಳು ಬ್ರಹ್ಮಾ ತಂದೆಯ ಜೊತೆ-ಜೊತೆಗೆ ತನ್ನ ಮನೆಗೆ ಹೋಗಬೇಕು. ಹಿಂದೆ ಹಿಂದೆ ಬರಬಾರದು. ಜೊತೆಯಲ್ಲಿಯೇ ಹೋಗಬೇಕು. ಜೊತೆಯಲ್ಲಿ ಹೋಗಲು ಸಮಾನರಂತೂ ಆಗಬೇಕಲ್ಲವೇ! ಸಮಾನತೆ ಇಲ್ಲದೇ ಜೊತೆಯಾಗಿ ಹೋಗಲು 'ಸಾಧ್ಯವಿಲ್ಲ. ಮತ್ತು ನಿಮ್ಮ ರಾಜ್ಯದಲ್ಲಿ. ಮೊದಲನೆಯ ಜನ್ಮದಲ್ಲಿ ಮೊದಲನೆಯವರೇ ಹೋಗುತ್ತಾರಲ್ಲವೇ! ಒಂದುವೇಳೆ ಎರಡನೆಯ, ಮೂರನೆಯ ಜನ್ಮದಲ್ಲಿ ಬಂದು ಒಳ್ಳೆಯ ರಾಜನಾದರೂ ಸಹ, ಎರಡನೆಯವರು. ಮೂರನೆಯವರು ಎಂದೇ ಹೇಳಲಾಗುತ್ತದಲ್ಲವೇ! ಜೊತೆಯಲ್ಲಿ ಹೋಗಬೇಕು ಮತ್ತು ಜೊತೆಯಲ್ಲಿ ಬ್ರಹ್ಮಾತಂದೆಯಂತೆ ಮೊದಲನೆಯ ಜನ್ಮಕ್ಕೆ ಅಧಿಕಾರಿ ಆಗಬೇಕು. ಇವರಾಗಿದ್ದಾರೆ ನಂಬರ್‌ವನ್ ಪಾಸ್ ವಿತ್ ಆನರ್ ಆಗುವವರು. ಅಂದಾಗ ಪಾಸ್ ವಿತ್ ಆನರ್ ಆಗಬೇಕೋ ಅಥವಾ ಪಾಸ್ ಅಂಕಗಳನ್ನು ತೆಗೆದುಕೊಂಡರೆ ಸಾಕಾಗುತ್ತದೆಯೇ? ನಾವು ಏನನ್ನು ಮಾಡುತ್ತಿದ್ದೇವೆ, ಏನಾಗುತ್ತಿದೆ ಇದನ್ನು ಬಾಪ್‌ದಾದಾ ನೋಡುವುದಿಲ್ಲ ಎಂದು ಎಂದೂ ಸಹ ಯೋಚಿಸಬೇಡಿ. ಇದರಲ್ಲಿ ಎಂದೂ ಸಹ ಸೋಮಾರಿತನದಲ್ಲಿ

ಬರಬಾರದು. ಬಾಪ್‌ದಾದಾರವರನ್ನು ಒಂದುವೇಳೆ ಯಾವುದೇ ಮಗು ತನ್ನ ಹೃದಯದ ಚಾರ್ಟನ್ನು ಕೇಳಿದರೆ, ಹೇಳಬಹುದು. ಆದರೆ ಈಗ ಹೇಳುವುದಿಲ್ಲ.

ಬಾಪ್‌ದಾದಾರವರು ಪ್ರತಿಯೊಬ್ಬ ಮಹಾರಥಿ, ಕುದರೆ ಸವಾರ, ಎಲ್ಲರ ಚಾರ್ಟನ್ನು ನೋಡುತ್ತಿದ್ದಾರೆ. ಕೆಲವೊಮ್ಮೆ ಬಾಪ್‌ದಾದಾರವರಿಗೆ ಬಹಳ ಕನಿಕರ ಬರುತ್ತದೆ. ಇವರು ಯಾರಾಗಿದ್ದಾರೆ ಮತ್ತು ಇವರು ಏನು ಮಾಡುತ್ತಿದ್ದಾರೆ? ಬ್ರಹ್ಮಾತಂದೆ ಹೇಳುತ್ತಿದ್ದರಲ್ಲವೇ, ಏನೆಂದು ಹೇಳುತ್ತಿದ್ದರು? ಬೆಲ್ಲಕ್ಕೆ ಗೊತ್ತು ಚೀಲಕ್ಕೆ ಗೊತ್ತು. ಶಿವಬಾಬಾರವರಿಗೆ ಮತ್ತು ಬ್ರಹ್ಮಾಬಾಬಾರವರಿಗೆ ಗೊತ್ತು, ಏಕೆಂದರೆ ಬಾಪ್‌ದಾದಾರವರಿಗೆ ಬಹಳ ದಯೆ ಬರುತ್ತದೆ. ಆದರೆ ಇಂತಹ ಮಕ್ಕಳು ಬಾಪ್‌ದಾದಾರವರ ದಯಾ ಸಂಕಲ್ಪವನ್ನು ಕ್ಯಾಚ್ ಮಾಡಲು ಸಾಧ್ಯವಿಲ್ಲ. ಅಂತಹವರು ಬಾಪ್‌ದಾದಾರವರ ಸಂಕಲ್ಪವನ್ನೂ ಸಹ ಸ್ಪರ್ಷ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಬಾಪ್‌ದಾದಾರವರಿಗೆ ಮಕ್ಕಳ ಭಿನ್ನ ಭಿನ್ನ ಪದ ರಾಯಲ್ ಸೋಮಾರಿತನವನ್ನು ಬಾಪ್‌ದಾದಾ ನೋಡುತ್ತಿರುತ್ತಾರೆ. ಇಂದು ಬಾಪ್‌ದಾದಾರವರು ಮಕ್ಕಳ ಮೇಲಿನ ದಯೆಯಿಂದ ಹೇಳುತ್ತಾರೆಂದು ತಿಳಿಯಬಾರದು. ಸತ್ಯಯುಗದಲ್ಲಿಯಂತೂ ಯಾರು ಏನಾಗುತ್ತಾರೆ ಎಂದು ಯಾರಿಗೂ ತಿಳಿಯುವುದಿಲ್ಲ. ಕೆಲವು ಮಕ್ಕಳು ತಿಳಿದುಕೊಳ್ಳುತ್ತಾರೆ. ಈಗಲೇ ಮಜಾ ಮಾಡೋಣ. ಈಗ ಏನು ಮಾಡಬೇಕೆಂದಿದ್ದೀರೋ ಮಾಡಿಕೊಳ್ಳಿ ನಮ್ಮನ್ನು ಯಾರೂ ತಡೆಯುವವರಾಗಲಿ, ನೋಡುವವರಾಗಲಿ, ಇರುವುದಿಲ್ಲವೆಂದು ಕೆಲವು ಮಕ್ಕಳು ತಿಳಿದುಕೊಳ್ಳುತ್ತಾರೆ. ಆದರೆ ಈ ತಿಳುವಳಿಕೆ ತಪ್ಪಾಗಿದೆ. ಆದರೆ ಬಾಪ್‌ದಾದಾ ಯಾರ ಹೆಸರನ್ನೂ ಹೇಳುವುದಿಲ್ಲ. ಒಂದುವೇಳೆ ಹೆಸರು ಹೇಳಿದರೆ ನಾಳೆ ಸರಿಹೋಗಬೇಕಾಗುತ್ತದೆ. ಇಂದು ಹೋಲಿಯನ್ನು ಆಚರಿಸಿಕೊಳ್ಳುತ್ತಿದ್ದೀರಲ್ಲವೇ! ಆದರಿಂದ ಏನು ಮಾಡಬೇಕೆಂದು ಅರ್ಥವಾಯಿತೇ? ಏನು ಮಾಡಬೇಕೆಂದು ಪಾಂಡವರು ತಿಳಿದುಕೊಂಡಿರೋ ಅಥವಾ ಇಲ್ಲವೋ" ಹಾ! ಹೀಗೆಲ್ಲಾ ನಡೆಯುತ್ತದೆ.....! ನಡೆಯುತ್ತದೆಯೇ? ಆದರೆ ನಡೆಯುವುದಿಲ್ಲ. ಏಕೆಂದರೆ ಬಾಪ್‌ದಾದಾರವರ ಬಳಿ ಪ್ರತಿಯೊಬ್ಬರಿಂದ ಪ್ರತಿದಿನದ ರಿಪೋರ್ಟ್ ಬರುತ್ತದೆ. ಬಾಪ್‌ದಾದಾ ಪರಸ್ಪರ ವಾರ್ತಾಲಾಪ ಮಾಡುತ್ತಾರೆ. ಬಾಪ್‌ದಾದಾ ಎಲ್ಲಾ ಮಕ್ಕಳಿಗೆ ಮತ್ತೊಮ್ಮೆ ಸೂಚನೆಯನ್ನು ಕೊಡುತ್ತಿದ್ದಾರೆ. ಈಗ ಸಮಯ ಎಲ್ಲಾ ಪ್ರಕಾರದಿಂದ ಅತಿಯಾಗಿ ಹೋಗುತ್ತಿದೆ. ಮಾಯೆ ಹಾಗೂ ಪ್ರಕೃತಿಯೂ ಸಹ ತಮ್ಮ ಅತಿಯಾದ ಪಾತ್ರವನ್ನು ಅಭಿನಯಿಸುತ್ತಿದೆ. ಇಂತಹ ಸಮಯದಲ್ಲಿ ಬ್ರಾಹ್ಮಣ ಮಕ್ಕಳು ತಮ್ಮ ಕಡೆ ಗಮನವನ್ನೂ ಸಹ ಅತಿಯಾಗಿ ಅರ್ಥಾತ್ ಮನ, ವಚನ, ಕರ್ಮದಲ್ಲಿ ಅತಿಯಾದ ಗಮನವಿರಬೇಕು. ಅರ್ಥಾತ್ ಬ್ರಾಹ್ಮಣ ಮಕ್ಕಳಲ್ಲಿ ಸಾಧಾರಣ ಪುರುಷಾರ್ಥವಿರಬಾರದು, ಈಗ ಸಮಯವು ಎಲ್ಲಾ ರೀತಿಯಲ್ಲಿ ಅತಿಯಾಗಿ ಹೋಗುತ್ತದೆ ಎಂದು ಬಾಪ್‌ದಾದಾ ಸೂಚನೆಯನ್ನೂ ಸಹ ಕೊಟ್ಟಿದ್ದೇವೆ. ಬಾಪ್‌ದಾದಾ ನೋಡುತ್ತಿದ್ದಾರೆ - ಸೇವೆಯೊಂದಿಗಿನ ಸೆಳೆತ ಬಹಳ ಚೆನ್ನಾಗಿದೆ. ಸೇವೆಗಾಗಿ ಸದಾ ಸಿದ್ಧರಾಗಿರುತ್ತೀರಿ, ಒಂದುವೇಳೆ ಸೇವೆಯ ಅವಕಾಶ ಸಿಕ್ಕರೆ ಪ್ರೀತಿಯಿಂದ ಸೇವೆಗಾಗಿ ತಕ್ಷಣ ಎವರ್ ರೆಡಿ ಆಗುತ್ತಿದ್ದೀರಿ. ಆದರೆ ಈಗ ಸೇವೆಯೊಂದಿಗೆ ಅಡಿಶನ್ ಆಗಿ- ವಾಣಿಯೊಂದಿಗೆ ಮನಸ್ಸು ಅರ್ಥಾತ್ ನಿಮ್ಮ ಆತ್ಮ ವಿಶೇಷವಾಗಿ ಯಾವುದೋ ಒಂದು ಪ್ರಾಪ್ತಿ ಸ್ವರೂಪ ಸ್ಥಿತಿಯಲ್ಲಿ ಸ್ಥಿತರನ್ನಾಗಿ ಮಾಡಿಕೊಂಡು ಆಗವಾಣಿಯಿಂದ ಸೇವೆಯನ್ನು ಮಾಡಿರಿ. ಉಪನ್ಯಾಸ ಹೇಳುತ್ತಿದ್ದೀರಿ ಎಂದಿಟ್ಟುಕೊಳ್ಳಿ. ಆದರೆ ಆ ಸಮಯದಲ್ಲಿ ನೀವು ಆತ್ಮಿಕ ಸ್ಥಿತಿಯಲ್ಲಿ ಸ್ಥಿತರಾಗಿ ವಿಶೇಷವಾಗಿ ಶಕ್ತಿ ಅಥವಾ ಶಾಂತಿ ಅಥವಾ ಪರಮಾತ್ಮನ ಪ್ರೀತಿ ಹೀಗೆ ಯಾವುದೋ ಒಂದು ವಿಶೇಷ ಅನುಭೂತಿಯನ್ನು ಮಾಡಿಸಿರಿ. ಮನಸ್ಸಿನಿಂದ

ನಿಮ್ಮ ಆತ್ಮಿಕ ಸ್ಥಿತಿಯ ಪ್ರಭಾವವನ್ನು ವಾಯುಮಂಡಲದಲ್ಲಿ ವ್ಯಾಪಿಸಿರಿ ಮತ್ತು ಅದರೊಂದಿಗೆ ವಾಚಾದ ಮೂಲಕ ಸಂದೇಶವನ್ನು ಕೊಡಿ ಮತ್ತು ಮನಸ್ಸಿನ ಆತ್ಮಿಕ ಸ್ಥಿತಿಯಿಂದ ಅನುಭೂತಿಯನ್ನು ಮಾಡಿಸಿರಿ. ಉಪನ್ಯಾಸ ಹೇಳುವ ಸಮಯದಲ್ಲಿ ನಿಮ್ಮ ಮಾತಿನ ಮೂಲಕ, ನಿಮ್ಮ ಮಸ್ತಕದ ಮೂಲಕ, ನಯನಗಳ ಮೂಲಕ, ಮುಖದ ಮೂಲಕ, ಆ ಅನುಭೂತಿಯ ಮುಖವು ಕಾಣಿಸಬೇಕು. ಅರ್ಥಾತ್ ಇಂದು ಉಪನ್ಯಾಸವನ್ನು ಕೇಳಿದೆವು ಆದರೆ ಪರಮಾತ್ಮನ ಪ್ರೀತಿಯ ಬಹಳ ಒಳ್ಳೆಯ ಅನುಭವವು ಸಹ ಆಗುತ್ತಿದೆ ಎಂದು ಅನಿಸಬೇಕು. ಮಾನವಾತ್ಮರಿಗೆ ತರಂಗಗಳು ತಲುಪಬೇಕು. ವಾಯುಮಂಡಲವು ತಯಾರಾಗಬೇಕು. ವಿಜ್ಞಾನದ ಸಾಧನಗಳಿಂದ ತಂಪನ್ನು (ಎ.ಸಿ) ಅನುಭವ ಮಾಡಿಸುತ್ತಿದ್ದಾರಲ್ಲವೇ! ಬಹಳ ತಣ್ಣಗಿದೆ ಎಂದು ಎಲ್ಲರಿಗೂ ಅನುಭವವಾಗುತ್ತಿದೆ ಅಲ್ಲವೇ, ಬೆಚ್ಚನೆಯ ಅನುಭವವನ್ನು ಸಹ ಮಾಡಿಸುತ್ತಿದ್ದಾರೆ. ತಂಪಾಗಿದ್ದಾಗ ಬೆಚ್ಚನೆಯ ಅನುಭವವನ್ನು, ತಾಪವು ಜಾಸ್ತಿ ಇದ್ದಾಗ ತಂಪಾದ ಅನುಭವವನ್ನು ಮಾಡಿಸುತ್ತಿದ್ದಾರಲ್ಲವೇ. ಹಾಗಾದರೆ ನಿಮ್ಮದು ಶಾಂತಿಯ ಶಕ್ತಿ. ಇದರಿಂದ ಸಹಜವಾಗಿ ಪ್ರೇಮ ಸ್ವರೂಪವನ್ನು, ಸುಖ ಸ್ವರೂಪವನ್ನು, ಶಾಂತಿ ಸ್ವರೂಪದ ವಾಯುಮಂಡಲವನ್ನು ಅನುಭವ ಮಾಡಿಸಲಾಗುವುದಿಲ್ಲವೇ. ಇದರ ಬಗ್ಗೆ ಪರಿಶೋಧನೆಯನ್ನು ಮಾಡಿರಿ. ಬಹಳ ಬಹಳ ಚೆನ್ನಾಗಿ ಮಾಡಿದ್ದೀರಿ ಎಂದು ಕೇವಲ ಹೇಳುವುದಲ್ಲ ಅವರು ಸಹ ಚೆನ್ನಾಗಿ ಆಗಿಬಿಡಬೇಕು. ಆಗಲೇ ಸಮಾಪ್ತಿ ಸಮಯವನ್ನು ಸಮಾಪ್ತಿ ಮಾಡಿ ನಿಮ್ಮ ರಾಜ್ಯವನ್ನು ತರಬಲ್ಲಿರಿ. ನಿಮಗೆ ನಿಮ್ಮ ರಾಜ್ಯವು ನೆನಪಿಗೆ ಬರುತ್ತಿಲ್ಲವೇ? ಸಂಗಮಯುಗ ಶ್ರೇಷ್ಠವಾದದ್ದು. ಅದನ್ನು ಬಿಡಿ, ಆದರೆ ತಾವು ದಯಾ ಹೃದಯಿಗಳು, ವಿಶ್ವಕಲ್ಯಾಣಕಾರಿಗಳಾದ ಓ ಮಕ್ಕಳೇ! ದುಃಖ, ಅಶಾಂತಿಯಲ್ಲಿರುವ ನಿಮ್ಮ ಸಹೋದರಿ ಸಹೋದರರ ಮೇಲೆ ನಿಮಗೆ ದಯೆ ಬರುತ್ತಿಲ್ಲವೇ? ದುಃಖಮಯ ಪ್ರಪಂಚವನ್ನು ಸುಖಮಯ ಪ್ರಪಂಚವನ್ನಾಗಿ ಮಾಡಬೇಕೆಂಬ ಉತ್ಸಾಹ ಬರುತ್ತಿಲ್ಲವೇ? ಉಲ್ಲಾಸ ಬರುತ್ತಿಲ್ಲವೇ? ದುಃಖವನ್ನು ನೋಡಬೇಕೆಂದುಕೊಳ್ಳುತ್ತಿದ್ದೀರಾ? ನಿಮ್ಮ ಸಹೋದರ ಸಹೋದರಿಯರು ಎಂದಾಗ ಅವರ ದುಃಖವನ್ನು ನಿಮಗೆ ನೋಡಬೇಕೆನಿಸುತ್ತಿದೆಯೇ? ನಿಮ್ಮ ಸ್ವರೂಪವನ್ನು, ಕೃಪಾಳು ಸ್ವರೂಪವನ್ನು ಪ್ರತ್ಯಕ್ಷ ಮಾಡಿರಿ. ಈ ಪ್ರೋಗ್ರಾಮ್ ಮಾಡಿದ್ದೇವೆ, ಆ ಪ್ರೋಗ್ರಾಮ್ ಮಾಡಿದ್ದೇವೆ ಹೀಗೆ ಕೇವಲ ಸೇವೆಯಲ್ಲಿ ನಿಮಗ್ನವಾಗಬೇಡಿರಿ. ಈ ವರ್ಷವೂ ಪೂರ್ಣವಾಗಿ ಬಿಡುತ್ತದೆ. ಈಗ ದಯಾಸಾಗರರಾಗಿರಿ. ದೃಷ್ಟಿಯ ಮೂಲಕ ಅಥವಾ ಅನುಭೂತಿಯ ಮೂಲಕ ಅಥವಾ ಆತ್ಮಿಕ ಸ್ಥಿತಿಯ ಪ್ರಭಾವದ ಮೂಲಕ ಸೇವೆಯನ್ನು ಮಾಡುವ ದಯಾಹೃದಯಿಯಾಗಿರಿ. 66 ವರ್ಷಗಳು ಸಮಾಪ್ತಿಯಾಗಿ ಬಿಟ್ಟಿವೆ. ಕಡಿಮೆಯಲ್ಲ, 66 ವರ್ಷಗಳು. ಬ್ರಹ್ಮಾ ತಂದೆಯ ಅವ್ಯಕ್ತವಾಗಿಯೂ 33 ವರ್ಷಗಳಾಗುತ್ತಿದೆ. ಯಾವಾಗ, ಯಾವಾಗ ಎಂದು ಬ್ರಹ್ಮಾ ತಂದೆಯು ಕೇಳುತ್ತಿದ್ದಾರೆ. ಮಕ್ಕಳು ಯಾವಾಗ ಬರುತ್ತಾರೆ ಎಂದು ಕೇಳುತ್ತಿದ್ದಾರೆ. ಮನೆಯ ದ್ವಾರ ತಂದೆಯೊಂದಿಗೆ ತೆಗೆಯುತ್ತೀರಾ ಅಥವಾ ನಂತರ ಬರುತ್ತೀರಾ? ತಂದೆಯು ಹಾದಿ ಕಾಯುತ್ತಿದ್ದಾರೆ? ಆದ್ದರಿಂದ ಸೇವೆಯಲ್ಲಿ ಬದಲಾವಣೆಯನ್ನು ತನ್ನಿರಿ. ಈ ವಿಧಿಯ ಪ್ರಕಾರವಾಗಿ ನೀವು ಸೇವೆ ಮಾಡಿದ್ದೇ ಆದರೆ ಸ್ವಲ್ಪ ಸಮಯದಲ್ಲಿ ನಿಮ್ಮ ಹತ್ತಿರ ಕ್ವಾಲಿಟಿ ಆತ್ಮರು ತಯಾರಾಗುತ್ತಾರೆ ಎಂದು ಬಾಪ್‌ದಾದಾ ಗ್ಯಾರಂಟಿಯನ್ನು ಕೊಡುತ್ತಿದ್ದಾರೆ. ವಾರಸರ ಕ್ವಾಲಿಟಿಯವರ ಮಳೆ ಸುರಿಯುತ್ತದೆ. ಇಷ್ಟು ಶ್ರಮ ಮಾಡಬೇಕಾಗಿರುವ ಅವಶ್ಯಕತೆಯೂ ಇರುವುದಿಲ್ಲ. ಈಗ ಈ ಕಾರ್ಯವು ಆಗಲಿದೆ, ಇದರಲ್ಲಿ ನೀವು ಸಹಯೋಗಿಯಾಗಿರಿ ಎಂದು ನಿಮಗೆ ಹೇಳಬೇಕಾಗಿರುವ ಅವಶ್ಯಕತೆಯೂ ಇರುವುದಿಲ್ಲ. ನಾವು ಸಹಯೋಗವನ್ನು ಕೊಡುತ್ತೇವೆ ಎಂದು ಅವರೇ ಹೇಳುತ್ತಾರೆ. ಆದರೆ ನೀವು ಸಾಧಾರಣ ಪುರುಷಾರ್ಥವನ್ನು ಸಾಧಾರಣ ವಿಧಿಯಿಂದ ಮಾಡುವ ಸೇವೆಯನ್ನು ಪರಿವರ್ತನೆ ಮಾಡಿರಿ.

ಚಿಮ್ ಚಿಮ್ ಎಂಬ ಹೊಳಪು ಬರಬೇಕು. ಇದಂತೂ ಆಗಲೇಬೇಕು. ನೀವು ಕೇವಲ ಅನುಭೂತಿಯನ್ನು ಮಾಡಿಸುವ ವಿಧಿಯನ್ನು ಯೋಚಿಸಿರಿ. ಕೇವಲ ಉಪನ್ಯಾಸ ಅಥವಾ ಕೋರ್ಸ್ ಅನ್ನು ಹೇಳುವುದಲ್ಲ. ಅವುಗಳನ್ನು ಬಹಳ ಮಾಡಿದ್ದೀರಿ. ಏನು ಮಾಡಬೇಕೆಂದು ಸೇವೆಯ ಬಗ್ಗೆ ಪ್ಲಾನ್ ಹೇಳಿರೆಂದು ಕೇಳುತ್ತಿದ್ದೀರಿ. ಹೊಳಪು ತೋರಿಸಿರಿ ನೀವು ಮಾಡುವ ಸೇವೆಯ ವೇಗವು ಕಡಿಮೆ. ಲಕ್ಷ್ಮಿ ದೇವಿಯ ಬಗ್ಗೆ ಹೇಳುತ್ತಾರಲ್ಲವೇ? ಎರಡು ಕೈಗಳಿಂದ ಧನವನ್ನು ಪಳಪಳ ಹೊಳೆಯುತ್ತಿರುವಂತೆ ತೋರಿಸುತ್ತಾರಲ್ಲವೇ. ಹಾಗೆ ಅನುಭವ ಮಾಡಿಸಬೇಕು. ಆದರೆ ಯಾರು ಅನುಭೂತಿಯನ್ನು ಮಾಡಿಸಬಲ್ಲರು ಎಂದರೆ ವ್ಯರ್ಥ ಚಿಂತನೆ, ವ್ಯರ್ಥ ದರ್ಶನ, ಸಮಯವನ್ನು ವ್ಯರ್ಥವಾಗಿ ಕಳೆಯುವುದರಿಂದ ಮುಕ್ತರಾಗಿ ಇರುವವರು ಮಾಡಿಸಬಲ್ಲರು. ಈ ದಿನಗಳಲ್ಲಿ ಸ್ವಲ್ಪ ಸ್ವಲ್ಪ ವ್ಯರ್ಥವಿರುವುದನ್ನು ಬಾಪ್‌ದಾದಾ ನೋಡಿದರು. ಅದು ಸಹ ಹೇಳಬೇಕೇ? ಒಳ್ಳೆಯದು. ಇಂದು ಎಲ್ಲವನ್ನು ಹೇಳುತ್ತೇನೆ.

ಹೋಲಿ ಅಲ್ಲವೇ! ಹೋಲಿಗೆ ಕೆಟ್ಟ ವಿಷಯಗಳನ್ನು ಮಾತನಾಡುವುದಿಲ್ಲ. ಟೀಚರ್ಸ್ ಇಂದು ಹೋಲಿ ಅಲ್ಲವೇ! ಒಳ್ಳೆಯದು. ಬಾಪ್‌ದಾದಾ ಮತ್ತೊಂದು ವಿಷಯವನ್ನು ಸಹ ನೋಡಿದರು. ಹೇಳಲು ಇಷ್ಟವಿಲ್ಲ. ಆಗಾಗ ಕೆಲಮಕ್ಕಳು ಒಳ್ಳೊಳ್ಳೆಯವರು ಸಹ ಇತರರ ವಿಷಯದಲ್ಲಿ ಹೆಚ್ಚಾಗಿ ಇರುತ್ತಿದ್ದಾರೆ. ಇತರರ ವಿಷಯಗಳನ್ನು ನೋಡುವುದು, ಇತರ ವಿಷಯಗಳನ್ನು ವರ್ಣನೆ ಮಾಡುವುದು ಮತ್ತು ನೋಡುವುದು... ಸಹ ವ್ಯರ್ಥ ವಿಷಯಗಳನ್ನೇ ನೋಡುತ್ತಿದ್ದಾರೆ. ಒಬ್ಬರಿನ್ನೊಬ್ಬರ ವಿಶೇಷತೆಗಳನ್ನು ವರ್ಣನೆ ಮಾಡುವುದು ಎಂಬುವುದು ಕಡಿಮೆ ಇದೆ. ಪ್ರತಿಯೊಬ್ಬರ ವಿಶೇಷತೆಯನ್ನು ನೋಡುವುದು, ವರ್ಣನೆ ಮಾಡುವುದು, ಅವರ ವಿಶೇಷತೆಯ ಮೂಲಕ ಅವರಿಗೆ ಉತ್ಸಾಹ ಉಲ್ಲಾಸಗಳನ್ನು ಕೊಡುವುದು ಎಂಬುದು ಕಡಿಮೆಯಾಗಿ ಇದೆ. ಆದರೆ ವ್ಯರ್ಥ ವಿಷಯಗಳಲ್ಲಿ ಮಾತ್ರ ಹೆಚ್ಚಾಗಿ ಇರುತ್ತಿದ್ದಾರೆ. ಅರ್ಥಾತ್ ಅಂತಹ ವಿಷಯಗಳನ್ನು ಬಿಟ್ಟುಬಿಡಿ ಎಂದು ಬಾಪ್‌ದಾದಾ ಹೇಳುತ್ತಾರೆ. ಸ್ವಯಂನಲ್ಲಿ ಇರುವವುಗಳನ್ನೇ ಬಿಡಲು ಪ್ರಯತ್ನ ಮಾಡುತ್ತಿದ್ದಾರೆ ಆದರೆ ಇತರರಲ್ಲಿ ಇರುವುದನ್ನು ಮಾತ್ರ ನೋಡುವ ಅಭ್ಯಾಸವಿದೆ. ಅದರಲ್ಲಿ ಸಮಯವು ಬಹಳ ವ್ಯರ್ಥವಾಗಿ ಬಿಡುತ್ತಿದೆ. ಬಾಪ್‌ದಾದಾ ವಿಶೇಷವಾಗಿ ಒಂದು ಶ್ರೀಮತವನ್ನು ಕೊಡುತ್ತಿದ್ದಾರೆ. ಸಾಧಾರಣ ವಿಷಯವೇ ಆದರೆ ಬಹಳಷ್ಟು ಸಮಯವು ವ್ಯರ್ಥವಾಗಿ ಬಿಡುತ್ತದೆ. ಆದ್ದರಿಂದ ನಿಮ್ಮ ಮಾತನ್ನು ನಿರ್ಮಾಣವನ್ನಾಗಿ ಮಾಡಿಕೊಳ್ಳಿರಿ. ಮಾತಿನಲ್ಲಿ ನಿರ್ಮಾಣತೆ ಕಡಿಮೆಯಾಗಬಾರದು. ಸಾಧಾರಣ ಮಾತುಗಳನ್ನು ಮಾತನಾಡುತ್ತಿದ್ದೀರಿ. ಹೀಗೆ ಮಾತನಾಡಬೇಕಾಗಿರುತ್ತದೆ ಎಂದುಕೊಳ್ಳುತ್ತಿದ್ದೀರಿ. ಆದರೆ ನಿರ್ಮಾಣತೆಗೆ ಬದಲು ಆಥಾರಿಟಿಯಿಂದ ಅರ್ಥಾಟ್ ನಿರ್ಮಾಣವಾಗಿ ಮಾತನಾಡುತ್ತಿಲ್ಲ ಅರ್ಥಾತ್ ಕಾರ್ಯದ ಅಥವಾ ಸೀಟ್(ಪದವಿಯ) ಅಭಿಮಾನವು ಶೇಕಡ 5ರಷ್ಟು ಕಾಣಿಸುತ್ತಿದೆ.ನಿರ್ಮಾಣತೆ ಎಂಬುದು ಬ್ರಾಹ್ಮಣ ಜೀವನದ ವಿಶೇಷ ಶೃಂಗಾರ. ಮನಸಾ ವಾಚಾ, ಸಂಭಂಧ ಸಂಪರ್ಕಗಳಲ್ಲಿ ನಿರ್ಮಾಣತೆ ಇರಬೇಕು. ಮೂರು ವಿಷಯಗಳಲ್ಲಿ ನಾನು ನಿರ್ಮಾಣವಾಗಿದ್ದೇನೆ. ಆದರೆ ಒಂದು ವಿಷಯದಲ್ಲಿ ಕಡಿಮೆ ಇದ್ದರೆ ಏನು ಆಗುವುದಿಲ್ಲ ಎಂದು ತಿಳಿಯಬೇಡಿರಿ. ಆದರೆ ಒಂದು ಲೋಪವೇ ಪಾಸ್ ವಿತ್ ಹಾನರ್ ಆಗಲು ಬಿಡುವುದಿಲ್ಲ. ನಿರ್ಮಾಣತೆಯೇ ಮಹಾನತೆಯಾಗಿದೆ. ನಿರ್ಮಾಣತೆ ಅರ್ಥಾತ್ ಬಾಗುವುದಲ್ಲ ಬಾಗಿಸಿಕೊಳ್ಳುವುದು. ಕೆಲವರು ಮಕ್ಕಳು ನಗುತ್ತಲೂ ಹೇಳುತ್ತಿದ್ದಾರೆ. ನಾನೇ ಬಾಗಬೇಕಾ, ಅವರು ಕೂಡ ಬಾಗಬೇಕಲ್ಲವೇ ಎಂದು. ಆದರೆ ಇದು ಬಾಗುವುದಲ್ಲ ವಾಸ್ತವಿಕವಾಗಿ ಪರಮಾತ್ಮನನ್ನು ಸಹ ನಿಮ್ಮ ಪ್ರತಿ

ಬಾಗಿಸಿಕೊಳ್ಳುವುದು. ಅರ್ಥಾತ್ ಇನ್ನು ಆತ್ಮರ ವಿಷಯವನ್ನು ಬಿಟ್ಟುಬಿಡಿ. ನಿರ್ಮಾಣತೆಯು ನಿರಹಂಕಾರಿಯನ್ನಾಗಿ ಸ್ವತಹವಾಗಿಯೇ ತಯಾರು ಮಾಡುತ್ತದೆ. ನಿರಹಂಕಾರಿ ಆಗುವ ಪುರುಷಾರ್ಥ ಮಾಡಬೇಕಾಗಿರುವ ಅವಶ್ಯಕತೆ ಇರುವುದಿಲ್ಲ. ನಿರ್ಮಾಣತೆ ಎಂಬುವುದು ನಿಮಗಾಗಿ ಪ್ರತಿಯೊಬ್ಬರ ಮನಸ್ಸಿನಲ್ಲಿ ಒಳ್ಳೆಯ ಸ್ಥಾನವನ್ನು ತಯಾರು ಮಾಡುತ್ತದೆ. ನಿರ್ಮಾಣತೆ ಪ್ರತಿಯೊಬ್ಬರ ಮನಸ್ಸಿನಿಂದ ನಿಮಗೆ ಆಶೀರ್ವಾದಗಳನ್ನು ಕೊಡಿಸುತ್ತದೆ. ಈ ಆಶೀರ್ವಾದಗಳು ಎಂಬುವು ಪುರುಷಾರ್ಥಕ್ಕೆ ಲಿಫ್ಟಿನ ಹಾಗೆಯೂ ಅಲ್ಲ, ರಾಕೆಟ್ ಆಗುತ್ತವೆ. ನಿರ್ಮಾಣತೆ ಎಂಬುದು ಅಂತಹದ್ದು. ಯಾರು ಹೇಗಿದ್ದರೂ ಬ್ಯುಸಿಯಾಗಿ ಇರುವವರಾಗಿದ್ದರೂ, ಕಠಿಣವಾದ ಹೃದಯ ಉಳ್ಳವರಾಗಿದ್ದರೂ, ಕ್ರೋಧಿಯಾಗಿದ್ದರೂ, ಸರ್ವರಿಂದ ಸಹಯೋಗವನ್ನು ಕೊಡಿಸಲು ನಿರ್ಮಾಣತೆಯು ನಿಮಿತ್ತವಾಗುತ್ತದೆ. ನಿರ್ಮಾಣತೆ ಎಂಬುದು ಪ್ರತಿಯೊಬ್ಬರ ಸಂಸ್ಕಾರಗಳಿಂದ ನಿಮ್ಮನ್ನು ಮಿಲನ ಮಾಡಿಸುತ್ತದೆ. ಸತ್ಯವಾದ ಬಂಗಾರವಾಗಿ ಇರುತ್ತಾರೆ. ಆದ್ದರಿಂದ ಸ್ವಯಂನಲ್ಲಿ ಹೊಂದಿಕೊಳ್ಳುವ ವಿಶೇಷತೆ ಇರುತ್ತದೆ, ಬಾಪ್‌ದಾದಾರವರು ನೋಡಿದರು ನಡವಳಿಕೆಯಲ್ಲಾದರೂ, ಸಂಬಂಧ ಸಂಪರ್ಕಗಳಲ್ಲಿ ಆದರೂ ಸೇವೆಯಲ್ಲಿಯೂ ಸಹ ಒಬ್ಬರ ಪ್ರತಿ ಮತ್ತೊಬ್ಬರು ನಿರ್ಮಾಣ ಭಾವದೊಂದಿಗೆ ಇದ್ದರೆ ಅದೇ ವಿಜಯವನ್ನು ಪ್ರಾಪ್ತಿ ಮಾಡಿಸುತ್ತದೆ. ಆದ್ದರಿಂದ ಈ ವರ್ಷದಲ್ಲಿ ವಿಶೇಷವಾಗಿ ಬಾಪ್‌ದಾದಾ ಈ ವರ್ಷವನ್ನು ನಿರ್ಮಾಣ ಮತ್ತು ನಿರ್ಮಲ ವರ್ಷ ಎಂದು ಹೇಳುತ್ತಿದ್ದಾರೆ. ಈ ವರ್ಷವನ್ನು ಆಚರಿಸಿಕೊಳ್ಳುತ್ತಿರಲ್ಲವೇ! ಆಚರಿಸಿಕೊಳ್ಳುವುದು ಅರ್ಥಾತ್ ತಯಾರಾಗುವುದು. ಈ ವರ್ಷ ನಿರ್ಮಾಣ ಮತ್ತು ನಿರ್ಮಲ ವರ್ಷ ಎಂದು ಕೇವಲ ಹೇಳುವುದಲ್ಲ, ತಯಾರಾಗಬೇಕಲ್ಲವೇ! ಹಿಂದೆ ಕುಳಿತಿರುವವರು ಹೇಳಿರಿ, ತಯಾರಾಗಬೇಕಲ್ಲವೇ! ಇನ್ನೂ ಮುತ್ತುಗಳನ್ನು ನಮಗೆ ಹೇಳಿರಿ. ಎಂದು ಎಲ್ಲರೂ ಕೇಳುವಂತೆ ನೀವು ಮಾತನಾಡಬೇಕು. ಬೇಡ, ಬೇಡ, ಹೇಳಬೇಡಿರಿ ಎಂದು ಹೇಳಬಾರದು. ಅಂತಹ ವಜ್ರಗಳು, ಮುತ್ತುಗಳಂತಹ ಮಾತು ನಿಮ್ಮ ಬಾಯಿಂದ ಬರಬೇಕು. ಅಭಿಮಾನದಿಂದ ಮಾತನಾಡಿ ಇತರರಿಗೆ ದುಃಖವನ್ನು ಏಕೆ ಕೊಡುತ್ತಿದ್ದೀರಿ. ಹಾಗೆ ಮಾತನಾಡುತ್ತಿದ್ದರೆ ದುಃಖದ ಖಾತೆಯೂ ಜಮಾ ಆಗಿಬಿಡುತ್ತದೆಯಲ್ಲವೇ? ಮಾತನಾಡಿಬಿಟ್ಟಿದ್ದೇವೆ, ಏನಾಗುತ್ತದೆ, ಹಾಗೆ ಎನ್ನಲೇಬೇಕು, ಎಂದು ನೀವು ತಿಳಿಯುತ್ತೀರಿ. ಆದರೆ ದುಃಖವನ್ನು ಕೊಡುವ ಖಾತೆಯೂ ಜಮಾ ಆಗಿಬಿಡುತ್ತದೆ. ಅರ್ಥವಾಯಿತೆ. ಆದ್ದರಿಂದ ಅಕೌಂಟನ್ನು ಇಟ್ಟುಕೊಳ್ಳಿ. ಅಕೌಂಟ್ ಅನ್ನು ಕೊಟ್ಟುಬಿಟ್ಟಿದ್ದೇವೆ ಎಂದುಕೊಳ್ಳಬೇಡಿ. ಅಕೌಂಟ್ ಇಟ್ಟುಕೊಳ್ಳುವುದರಲ್ಲಿ ಲಾಭವಿದೆ. ಬಾಪ್‌ದಾದಾರವರು ನೋಡಿದರು. ಕೆಲವರು ಒಳ್ಳೆಯ ಪುರುಷಾರ್ಥವನ್ನು ಮಾಡಿದ್ದಾರೆ. ಗಮನವನ್ನು ಇಟ್ಟಿದ್ದಾರೆ. ಆದರೆ ಈಗ ಏನು ನೆನಪಿಟ್ಟುಕೊಳ್ಳುತ್ತೀರಿ. ನಿರ್ಮಾಣವಾಗಿರಬೇಕು ಎಂದು ನೆನಪಿಟ್ಟುಕೊಳ್ಳಬೇಕು. ಆಗ ನಿರ್ಮಾಣ ಮತ್ತು ಕರ್ತವ್ಯ ಜೊತೆಯೇ ಇರುತ್ತದೆ. ನಿರ್ಮಾಣವಾಗಿರಿ ಮತ್ತು ನಿರ್ಮಾಣ ಮಾಡಿರಿ. ಆಗಲೇ ನೀವು ಹೇಳುತ್ತೀರಿ ಬಾಬಾ ಈಗ ಹೊಳಪು ಕಾಣಿಸುತ್ತಿದೆ ಎಂದು. ಆಗಲೇಬೇಕು ಇಡೀ ವಿಶ್ವದಲ್ಲಿರುವ ಆತ್ಮರೆಲ್ಲರೂ ವಾಹ್ ಪ್ರಭು! ಎನ್ನುತ್ತಾ ನಿಮ್ಮ ಮುಂದೆ ಬಾಗಲೇಬೇಕು. ಈ ವರ್ಷ ಏನು ಸೇವೆಯನ್ನು ಮಾಡಬೇಕು ಎಂದು ಹೇಳಿದ್ದೇನೆ. ಯಾವಾಗ ಯಾವ ಸೆಂಟರ್, ಯಾವ ಜೋನ್ ಮತ್ತು ಯಾವ ಸೆಂಟರ್ ಈ ವಿಧಿಯಿಂದ ವಾರಸರನ್ನು ತರುತ್ತಾರೆ ಎಂದು ನೋಡುತ್ತೇನೆ. ಈಗ ವಾರಸರ ಚಿಮ್ ಚಿಮ್ ಹೊಳಪು ತೋರಿಸಿರಿ. ಅನುಭೂತಿ ಮಾಡಿಸುವುದರಿಂದ ಈ ಸೇವೆ ಆಗುತ್ತದೆ. ಎಲ್ಲದಕ್ಕಿಂತಲೂ ಅನುಭವ ಎಂಬುದು ಉನ್ನತವಾದ ಅಧಿಕಾರ. ಅನುಭವಿಗಳನ್ನು ಯಾರು ಬದಲಾಯಿಸಲಾಗುವುದಿಲ್ಲ ಒಳ್ಳೆಯದು.

ಡಬಲ್ ವಿದೇಶೀಯರಿಗೆ ಯಾವುದಾದರೂ ವ್ಯರ್ಥ ವಿಷಯಕ್ಕೆ, ವಿರುದ್ಧ ವಿಷಯಕ್ಕೆ, ಗತಿಸಿ ಹೋದ ವಿಷಯಕ್ಕೆ ಮನಸ್ಸಿನಿಂದ ಬಿಂದುವನ್ನು ಇಡು ಇಡಲು ಬರುತ್ತಿದೆಯೇ? ಡಬಲ್ ವಿದೇಶಿಯರು ಎಂತಹ ಗತಿಸಿ ಹೋದ ವಿಷಯವನ್ನಾದರೂ ಒಳ್ಳೆಯ ವಿಷಯವನ್ನಾದರೂ ಮರೆತು ಹೋಗುವುದು ಎಂಬುದು ಇರುವುದಿಲ್ಲ. ವ್ಯರ್ಥ ವಿಷಯಗಳನ್ನೇ ಮರೆಯ ಬೇಕಾಗಿರುತ್ತದೆ ಆದ್ದರಿಂದ ಯಾವ ವಿಷಯವನ್ನು ಮರೆಯಬೇಕು ಅದಕ್ಕೆ ಕ್ಷಣದಲ್ಲಿ ಬಿಂದುವನ್ನು ಇಡುತ್ತಿದ್ದೀರಿ. ಇಡುತ್ತಿದ್ದೀರಾ? ವಿದೇಶಿಯರು ಯಾರಾದರೆ ಇಡುತ್ತಿದ್ದೇವೆ ಎನ್ನುತ್ತಿದ್ದೀರೋ ಅವರು ಕೈಯನ್ನು ಎತ್ತಿರಿ. ದೊಡ್ಡದಾಗಿ, ನಿಧಾನವಾಗಿ ಕೈಯನ್ನು ಎತ್ತಿರಿ. ಶುಭಾಶಯಗಳು. ಒಳ್ಳೆಯದು. ಯಾರಾದರೂ ಒಂದು ಕ್ಷಣದಲ್ಲಿ ಅಲ್ಲ, ಒಂದು ತಾಸು ಹಿಡಿಸುತ್ತದೆ ಎನ್ನುತ್ತೀರೋ ಅವರು ಕೈಯನ್ನು ಎತ್ತಿರಿ. ಕ್ಷಣವಂತೂ ಬಹಳ ಕಡಿಮೆ ಅಲ್ಲವೇ! ವಿದೇಶಿಯರು ಬಹಳ ಚೆನ್ನಾಗಿದ್ದೀರಿ. ಭಾರತವಾಸಿಯರು ಒಂದು ತಾಸಿನಲ್ಲಿ ಅಲ್ಲ ಆದರೆ ಅರ್ಧ ದಿನದಲ್ಲಿ ಬಿಂದುವನ್ನು ಇಡಬಲ್ಲೆವು ಎನ್ನುವವರು ಕೈಯನ್ನೆತ್ತಿರಿ. ಬಾಪ್‌ದಾದಾರವರಿಗಂತೂ ತಿಳಿದಿದೆ. ನೋಡುತ್ತಿದ್ದಾರೆ. ಕೈಯನ್ನು ಎತ್ತುತ್ತಿಲ್ಲ, ಆದರೆ ಸಮಯವೂ ಹಿಡಿಸುತ್ತಿದೆ. ಆದರೆ ಅರ್ಥಮಾಡಿಕೊಳ್ಳಿರಿ. ಅರ್ಧ ದಿನ ಇಡಿಸುತ್ತಿದೆ ಅಥವಾ ಒಂದು ತಾಸು ಇಡಿಸುತ್ತಿದೆ ಎಂದರೆ ಈಗಲೇ ನಿಮಗೆ ಅಡ್ವಾನ್ಸ್ ಪಾರ್ಟಿ ಅಹ್ವಾನವು ಬಂದರೆ ಏನು ಮಾಡುತ್ತೀರಿ? ಏನು ಫಲಿತಾಂಶವಿರುತ್ತದೆ. ಅಂತಮತಿ ಸೋಗತಿ ಏನಾಗುತ್ತದೆ? ತಿಳುವಳಿಕೆ ಉಳ್ಳವರಲ್ಲವೇ. ಆದ್ದರಿಂದ ನಿಮ್ಮ ಮನಸ್ಸನ್ನು ಬಿಸಿಯಾಗಿ ಇಟ್ಟುಕೊಳ್ಳುತ್ತೀರಲ್ಲವೇ? ಮನಸಾ ಸೇವೆಯ ದಿನಚರಿಯನ್ನು ತಯಾರು ಮಾಡಿಕೊಂಡರೆ ಬಿಂದುವನ್ನು ಇಡುವ ಅವಶ್ಯಕತೆಯೇ ಇರುವುದಿಲ್ಲ. ಬಿಂದರೂಪದಲ್ಲೇ ಇರುತ್ತೀರಿ. ಮನಸ್ಸನ್ನು ಸದಾ ಬ್ಯುಸಿಯಾಗಿ ಇಟ್ಟುಕೊಳ್ಳಿರಿ. ಖಾಲಿಯಾಗಿ ಇಡಬೇಡಿರಿ. ಮತ್ತೆ ಶ್ರಮ ಮಾಡಬೇಕಾಗಿ ಬರುತ್ತದೆ. ಶ್ರೇಷ್ಠಾತಿ ಶ್ರೇಷ್ಠ ಭಗವಂತನ ಮಕ್ಕಳಾದ್ದರಿಂದ ನಿಮ್ಮ ಒಂದೊಂದು ಕ್ಷಣ, ಒಂದೊಂದು ದಿನಚರಿಯು ನಿರ್ಣಯವಾಗಿ ಇರಬೇಕು. ಬಿಂದು ಏಕೆ ಇಡಲಾಗುತ್ತಿಲ್ಲ? ಇದಕ್ಕೆ ಕಾರಣವೇನು? ಕೆಲ ಮಕ್ಕಳು ಬಹಳ ಶ್ರಮ ಮಾಡುತ್ತಿದ್ದಾರೆ. ಮಕ್ಕಳು ಬಹಳ ಶ್ರಮ ಮಾಡುತ್ತಿದ್ದಾರೆ. ಇದು ಆಗಬಾರದು, ಇದು ಆಗಬಾರದು, ಆಗಬಾರದು ಎಂದುಕೊಳ್ಳುತ್ತಿದ್ದಾರೆ. ಆದರೆ ಆಗುತ್ತಿದೆ. ಬಾಪ್‌ದಾದಾರವರಿಗೆ ಮಕ್ಕಳ ಶ್ರಮ ಇಷ್ಟವಾಗುತ್ತಿಲ್ಲ. ಕಾರಣವೂ ಇದೆ. ರಾವಣನನ್ನು ಸಾಯಿಸುತ್ತಿದ್ದೀರಿ ಆದರೆ ಕೇವಲ ಸಾಯಿಸುವುದರಿಂದ ಬಿಡುವುದಿಲ್ಲ. ಹಚ್ಚುತ್ತಿದ್ದೀರಿ ಮತ್ತು ಹಚ್ಚುತ್ತೀರಿ ನಂತರ ಉಳಿದಿರುವ ಮೂಳೆಗಳನ್ನು ನದಿಯಲ್ಲಿ ಹಾಕುತ್ತಾರೆ ಆಗಲೇ ಸಮಾಪ್ತಿಯಾಗುತ್ತದೆ. ಯಾವ ಮನುಷ್ಯ ಶರೀರವನ್ನು ಬಿಟ್ಟರೂ ಆ ಮೂಳೆಗಳನ್ನು ನದಿಯಲ್ಲಿ ಹಾಕುತ್ತಾರೆ. ಆಗ ಸಮಾಪ್ತಿ ಎನ್ನುತ್ತಾರೆ. ನೀವೇನು ಮಾಡುತ್ತಿದ್ದೀರಿ? ಜ್ಞಾನದ ವಿಷಯಗಳಿಂದ ಧಾರಣೆಯ ಪಾಯಿಂಟ್ನಿಂದ ಆ ವಿಷಯ ಎಂಬ ರಾವಣನನ್ನು ಸಾಯಿಸುತ್ತಿದ್ದೀರಿ. ಆದರೆ ಯೋಗಾಗ್ನಿಯಲ್ಲಿ ಸ್ವಾಹ ಮಾಡುತ್ತಿಲ್ಲ. ಮತ್ತು ನಂತರ ಆ ವಿಷಯದ ಸ್ವಲ್ಪ ಉಳಿದಿರುವ ಮೂಳೆಗಳನ್ನು ಜ್ಞಾನಸಾಗರನಾದ ತಂದೆಗೆ ಅರ್ಪಣೆ ಮಾಡಿರಿ. ಮೂರು ಕೆಲಸಗಳನ್ನು ಮಾಡಿರಿ ಒಂದು ಕೆಲಸವನ್ನು ಮಾಡಬೇಡಿರಿ. ನೀವಂತೂ ಪುರುಷಾರ್ಥವನ್ನು ಮಾಡುತ್ತಿದ್ದೇವಲ್ಲ, ಮುರಳಿ ಕೂಡ ಓದುತ್ತಿದ್ದೇವೆ ಹತ್ತು ಬಾರಿಯೂ ಮುರಳಿಯನ್ನು ಓದುತ್ತಿದ್ದೇವೆ. ನಂತರವೂ ಬಂದುಬಿಟ್ಟಿದೆ ಎನ್ನುತ್ತಿದ್ದೀರಿ. ಏಕೆಂದರೆ ನೀವು ಯೋಗಾಗಲಿಯಲ್ಲಿ ಸುಡಲಿಲ್ಲ. ಸ್ವಾಹಾ ಮಾಡಲಿಲ್ಲ. ಅಗ್ನಿಯಲ್ಲಿ ಹಾಕಿದ ನಂತರ ಎಲ್ಲಾ ಗುರುತುಗಳು ಸಮಾಪ್ತಿ ಆಗಿಬಿಡುತ್ತವೆ. ನಂತರ ಅವುಗಳನ್ನು ತಂದೆಯ ಸಾಗರದಲ್ಲಿ ಹಾಕಿಬಿಡಿ. ಆಗ ಸಮಾಪ್ತಿ ಆಗಿಬಿಡುತ್ತವೆ. ಆದ್ದರಿಂದ ಬಾಪ್‌ದಾದಾ ಪ್ರತಿಯೊಂದು ಮಗುವನ್ನು ವ್ಯರ್ಥದಿಂದ ಮುಕ್ತರನ್ನಾಗಿ ನೋಡಬೇಕೆಂದುಕೊಳ್ಳುತ್ತಿದ್ದಾರೆ. ಮುಕ್ತಿ ವರ್ಷವನ್ನು ಆಚರಿಸಿಕೊಳ್ಳಿರಿ. ಯಾವ

ಲೋಪವಿದ್ದರೂ ಅದಕ್ಕೆ ಮುಕ್ತಿಯನ್ನು ಕೊಡಿ. ಎಲ್ಲಿಯವರೆಗೆ ಅದಕ್ಕೆ ಮುಕ್ತಿಯನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ತಂದೆಯ ಜೊತೆ ಮುಕ್ತಿಧಾಮಕ್ಕೆ ಹೋಗಲಾಗುವುದಿಲ್ಲ. ಮುಕ್ತಿಯನ್ನು ಕೊಟ್ಟುಬಿಡುತ್ತೀರಾ? ಮುಕ್ತಿವರ್ಷವನ್ನು ಆಚರಿಸಿಕೊಳ್ಳುತ್ತೀರಾ? ಆಚರಿಸಿಕೊಳ್ಳುತ್ತೇವೆ ಎಂಬುವವರು ಕೈಯನ್ನು ಅಲುಗಾಡಿಸಿರಿ. ಆಚರಿಸಿಕೊಳ್ಳುತ್ತೀರಾ? ಒಬ್ಬರನ್ನೊಬ್ಬರು ನೋಡಿದ್ದೀರಲ್ಲವೇ? ಆಚರಿಸಿಕೊಳ್ಳುತ್ತೀರಲ್ಲವೇ? ಒಳ್ಳೆಯದು. ಒಂದು ವೇಳೆ ಮುಕ್ತಿ ವರ್ಷವನ್ನು ಆಚರಿಸಿಕೊಂಡರೆ ವಜ್ರಗಳಿಂದ ತುಂಬಿರುವ ತಟ್ಟೆಗಳಿಂದ ಬಾಪ್‌ದಾದಾ ಬಹಳ ಬಹಳ ಶುಭಾಶಯಗಳು, ಗ್ರೀಟಿಂಗ್ಸ್ ಅನ್ನು ಕೊಡುತ್ತಾರೆ. ಒಳ್ಳೆಯದು. ನಿಮ್ಮನ್ನು ನೀವು ಸಹ ಮುಕ್ತಿ ಮಾಡಿಕೊಳ್ಳಿರಿ. ನಿಮ್ಮ ಸಹೋದರಿ ಸಹೋದರರನ್ನು ಸಹ ದುಃಖದಿಂದ ದೂರ ಮಾಡಿರಿ. ನಮ್ಮ ತಂದೆ ಬಂದು ಬಿಟ್ಟಿದ್ದಾರೆ ಎಂದು ಧೀನರ ಮನಸ್ಸಿನ ಖುಷಿಯಿಂದ ಈ ಮಾತು ಬರಬೇಕು.

ಇನ್ನುಳಿದಿರುವುದು ದಾದಿಯರು ಕೇಳುತ್ತಿದ್ದಾರೆ. ಬಾಪ್‌ದಾದಾರವರ ಪ್ರೋಗ್ರಾಮ್ ಹೇಗಿರುತ್ತದೆ ಎಂದು? ಬಾಪ್‌ದಾದಾ ಹೇಳುತ್ತಿದ್ದಾರೆ ಇಲ್ಲಿಯವರೆಗೆ ಹೇಗಾದರೆ ಪ್ರೋಗ್ರಾಮ್ ನಡೆಯುತ್ತಿದೆಯೋ ಆ ವಿಧಿಯಿಂದಲೇ ನಡೆಯುತ್ತದೆ. ಯಾವಾಗ ಅವಶ್ಯಕತೆ ಇದ್ದರೆ ದಾದಿಯರ ಆಸೆಯನ್ನು ಪೂರ್ಣ ಮಾಡುತ್ತೇನೆ. ಆದರೆ ಅವಸರವಿದ್ದರೆ ಮಾತ್ರ ಬರುತ್ತೇನೆ. ತಂದೆ ಬರುವುದಂತೂ ಸಹಜವೇ ಅಲ್ಲವೇ! ಬಾಪ್‌ದಾದಾ ಏಕೆ ಬರುವುದಿಲ್ಲ ಎಂದು ದಾದಿ ಭಾವಿಸುತ್ತಿದ್ದಾರೆ. ಆದರೆ ರಥವನ್ನು ಸಹ ನೋಡಿರಿ. 33 ವರ್ಷಗಳ ಪಾತ್ರವನ್ನು ಅಭಿನಯಿಸುವುದು ಸಹ ಶಕ್ತಿಗಳನ್ನು ಇಷ್ಟು ಶ್ರೇಷ್ಠವಾಗಿ ಧಾರಣೆ ಮಾಡುವುದು ಎಂದರೆ ಚಿಕ್ಕ ವಿಷಯವಲ್ಲ. ದಾದಿ ಏನು ಮಾಡುತ್ತಿದ್ದಾರೆ ಎಂದರೆ ಯಾವುದಾದರೂ ವಿಷಯ ಬಂದರೆ ಈಗೀಗಲೇ ಹೋಗಿ ಸಂದೇಶವನ್ನು ತನ್ನಿರೆಂದು ಹೇಳುತ್ತಿದ್ದಾರೆ. ಈಗ ಹಗಲಲ್ಲವೇ, ರಾತ್ರಿ ಹೋಗುತ್ತೇನೆ ಎಂದು ದಾದಿ (ಗುಲ್ಜಾರ್ ದಾದಿ) ಹೇಳಿದರೆ, ಅಲ್ಲ ಈಗಲೇ ಹೋಗಬೇಕು ಎನ್ನುತ್ತಿದ್ದಾರೆ. ಸಾಯಬೇಕಾಗಿರುತ್ತದೆ ಅಲ್ಲವೇ, ಶರೀರದಿಂದಂತು ಸಾಯಬೇಕಾಗಿರುತ್ತದೆ ಅಲ್ಲವೇ. ಸಂದೇಶವಾದರೂ, ಬಾಪ್‌ದಾದಾ ಪ್ರವೇಶಿಸಲು ಆಹ್ವಾನಿಸಬೇಕಾದರೂ, ಬಾಪ್‌ದಾದಾರವರನ್ನು ಆಹ್ವಾನಿಸುವುದು ಎಂಬುದು ದೊಡ್ಡ ವಿಷಯ. ಆದರೆ ಸಂದೇಶಕ್ಕಾಗಿಯೂ ಆ ಶರೀರಿ ಆಗಬೇಕಲ್ಲವೇ? ಸಾಯಬೇಕು, ಹಾಗೆ ಸಾಯುವುದು ಮಧುರವಾದದು ಆದರೂ ಸಹ ಸಾಯಬೇಕಲ್ಲವೇ, ಆದ್ದರಿಂದ. ಆದರೂ ಬಾಪ್‌ದಾದಾರವರಿಗೆ ದಾದಿಯರೆಂದರೆ ಬಹಳ ಬಹಳ ಗೌರವ ಮತ್ತು ಪ್ರೀತಿ. ಪ್ರೀತಿಯ ಹಗ್ಗದಿಂದ ಬಂಧಿಯಾಗುವುದು ಚೆನ್ನಾಗಿ ಬರುತ್ತದೆ. ಒಳ್ಳೆಯದು.

*ನಾಲ್ಕು ಕಡೆ ಇರುವ ಪವಿತ್ರವಾದ ಆತ್ಮರೆಲ್ಲರಿಗೂ, ಸದಾ ನಿರ್ಮಾಣರಾಗಿ ನಿರ್ಮಾಣ ಮಾಡುವಂತಹ ಬಾಪ್‌ದಾದಾರವರ ಸಮೀಪ ಆತ್ಮ ರಿಗೆ, ಸದಾ ತಮ್ಮ ಪುರುಷಾರ್ಥದ ವಿಧಿಯನ್ನು ತೀವ್ರವಾಗಿ ಮಾಡಿಕೊಂಡು ಸಂಪನ್ನರಾಗುವ ಸ್ನೇಹಿ ಆತ್ಮರಿಗೆ, ಸದಾ ತಮ್ಮ ಉಳಿತಾಯದ ಖಾತೆಯನ್ನು ಹೆಚ್ಚಿಸಿಕೊಳ್ಳುವ ತೀವ್ರ ಪುರುಷಾರ್ಥಿಗಳಿಗೆ, ತೀವ್ರ ಬುದ್ಧಿಯುಳ್ಳ ವಿಶಾಲ ಬುದ್ಧಿಗೆ ಶುಭಾಶಯಗಳು ಮತ್ತು ಹೋಲಿಯ ಅರ್ಥಾತ್ ಗತಿಸಿ ಹೋದುದ್ದೇನೋ ಗತಿಸಿ ಹೋಗಿದೆ ಎಂದು ಕ್ಷಣದಲ್ಲಿ ಬಿಂದುವನ್ನಿಡುವ ಮಕ್ಕಳಿಗೆ. ಬಹಳ ಬಹಳ ಪ್ರಿಯಸ್ಮೃತಿಗಳು. ಕೋಣೆ ಕೋಣೆಯಲ್ಲಿರುವ ಮಕ್ಕಳೆಲ್ಲರಿಗೆ ಸ್ಮೃತಿಗಳನ್ನು ಕೊಡುತ್ತಿದ್ದಾರೆ. ನಿಮ್ಮ ಲೆಕ್ಕಾಚಾರ, ಪ್ರಿಯ ಸ್ಮೃತಿಗಳೊಂದಿಗೆ

ಬರುವ ಉತ್ತರಗಳು, ಕಾರ್ಡುಗಳು ಮತ್ತು ಮನಸ್ಸಿನ ಸಂಕಲ್ಪ ಎಲ್ಲವೂ ತಲುಪುತ್ತಿವೆ. ಮನಸ್ಸಿನ ಆತ್ಮಿಕ ಸಂಭಾಷಣೆಯು ತಲುಪುತ್ತಿದೆ. ಪ್ರಿಯ ಸ್ಮೃತಿಗಳನ್ನು ಕೊಡುತ್ತಿದ್ದಾರೆ. ಪ್ರಿಯ ಸ್ಮೃತಿಗಳೊಂದಿಗೆ ಮಕ್ಕಳೆಲ್ಲರಿಗೂ ನಮಸ್ತೆ.*

ರಿವೈಸ್ ಕೋರ್ಸ್ 28-03-2002.
*ಈ ವರ್ಷವನ್ನು ನಿರ್ಮಾಣ, ನಿರ್ಮಲ ವರ್ಷ ಮತ್ತು ವ್ಯರ್ಥದಿಂದ ಮುಕ್ತರಾಗುವ ಮುಕ್ತಿ ವರ್ಷವನ್ನಾಗಿ ಆಚರಿಸಿರಿ.*

ಸಮಯ ಎಂಬುದು ಎಲ್ಲಾ ವಿಧವಾಗಿ ಅತಿಗೆ ಹೋಗುತ್ತದೆ. ಮಾಯೆಯು ತನ್ನ ಅತಿಯ ಪಾತ್ರವನ್ನು ಅಭಿನಯಿಸುತ್ತದೆ. ಪ್ರಕೃತಿಯು ತನ್ನ ಅತಿಯ ಪಾತ್ರವನ್ನು ಅಭಿನಯಿಸುತ್ತದೆ. ಅಂತಹ ಸಮಯದಲ್ಲಿ ಬ್ರಾಹ್ಮಣ ಮಕ್ಕಳಾದ ನಿಮ್ಮ ಮೇಲೆ ನಿಮಗೂ ಸಹ ಅತಿಯಾಗಿ ಗಮನವಿದ್ದರೆ ಮನಸಾ, ವಾಚಾ, ಕರ್ಮಣಾದಲ್ಲಿ ಅತಿಯಾಗಿ ಇರಬೇಕು. ಸಾಧಾರಣ ಪುರುಷಾರ್ಥವಲ್ಲ, ನೀವು ಮಾಡುವ ಸೇವೆಯ ವೇಗವು ಕಡಿಮೆ... ಯಾರು ಅನುಭೂತಿಯನ್ನು ಮಾಡಿಸಬಲ್ಲರು ಎಂದರೆ ಯಾರಾದರೆ ವ್ಯರ್ಥ ಚಿಂತನೆ, ವ್ಯರ್ಥ ದರ್ಶನ, ಸಮಯವನ್ನು ವ್ಯರ್ಥವಾಗಿ ಕಳೆಯುವುದರಿಂದ ಮುಕ್ತರಾಗಿರುತ್ತಾರೆಯೋ ಅವರೇ ಮಾಡಬಲ್ಲರು. ಇನ್ನು ಮುತ್ತುಗಳನ್ನು ನಮಗೆ ಹೇಳಿರಿ ಎಂದು ಎಲ್ಲರೂ ಹೇಳುವ ರೀತಿಯಾಗಿ ನೀವು ಮಾತನಾಡಬೇಕು. ಅಂತಹ ವಜ್ರಗಳು, ಮುತ್ತುಗಳಂತಹ ಮಾತು ನಿಮ್ಮ ಬಾಯಿಂದ ಬರಬೇಕು. ಎನ್ನುತ್ತಾ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

*ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.*
ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ಮಸ್ತಕದಲ್ಲಿ ಪ್ರಭುವಿನ ಪಾಲನೆ, ಶ್ರೇಷ್ಠ ವಿದ್ಯೆ, ಶ್ರೇಷ್ಠ ಮತದ 3 ರೇಖೆಗಳು ಹೊಳೆಯುತ್ತಾ ಇವೆ.

2. ನಾನು ಪ್ರತಿಯೊಂದು ಕರ್ಮದಲ್ಲಿ ಶ್ರೀಮತದ ಪ್ರಕಾರ ನಡೆಯುತ್ತಿದ್ದೇನೆ.

3. ನನಗೆ ಪರಮಾತ್ಮನಿಂದ ಶರೀರ ಪವಿತ್ರವಾಗಿ, ಆತ್ಮವು ಪವಿತ್ರವಾಗಿ, ಮತ್ತು ಪ್ರಕೃತಿಯೂ ಸಹ ಪವಿತ್ರವಾಗಿ, ಪಾವನವಾಗಿ, ಸುಖದಾಯಿಯಾಗಿ ಲಭಿಸಿವೆ.

4. ನಾನು ನಿಶ್ಚಯವೆಂಬ ಲೇಖನಿಯಿಂದ ನನ್ನ ಭವಿಷ್ಯದ ಚಿತ್ರವನ್ನು ಎದುರಿಗೆ ತಂದಿದ್ದೇನೆ.

5. ರಾಜಯೋಗಿಯಾದ ನಾನು ರಾಜ್ಯಾಧಿಕಾರಿ ಆಗುತ್ತಿದ್ದೇನೆ.

6. ಬಾಪ್‌ದಾದಾ ನನಗಾಗಿ ಸ್ವರ್ಣಿಮ, ಸತೋಪ್ರಧಾನ ಪ್ರಪಂಚವನ್ನು ಉಡುಗೊರೆಯಾಗಿ ತಂದಿದ್ದಾರೆ.

7. ನನಗೆ ನನ್ನ ಮೂರನೇ ನೇತ್ರದ ಮೂಲಕ ನನ್ನ ಮಧುರ ಮನೆ ಮತ್ತು ಮಧುರ ರಾಜಧಾನಿಯು ಸ್ಪಷ್ಟವಾಗಿ ಕಾಣಿಸುತ್ತಿವೆ.

8. ನಾನು ಇಲ್ಲಿ ನನ್ನ ಪಾತ್ರವನ್ನು ಪೂರ್ತಿ ಮಾಡಿಕೊಂಡು ನನ್ನ ಮನೆಗೆ ಮತ್ತು ನನ್ನ ರಾಜ್ಯಕ್ಕೆ ಹೋಗುತ್ತಿದ್ದೇನೆ.

9. ನಾನು ನನ್ನ ಯಥಾರ್ಥವಾದ ಅಕೌಂಟ್ ಅರ್ಥಾತ್ ನಿಯಮ ಪ್ರಮಾಣವಾಗಿ, ಯಥಾರ್ಥವಾಗಿ ಹೇಗಾದರೂ ಇರಲಿ, ಯಥಾರ್ಥ ರೂಪದಲ್ಲಿ ಸತ್ಯವಾದ ಅಕೌಂಟನ್ನು ತಂದೆಯ ಮುಂದೆ ಇಡುತ್ತಿದ್ದೇನೆ.

10. ನಾನು ಬ್ರಹ್ಮಾ ತಂದೆಯ ಸಮಾನವಾಗಿ, ಬ್ರಹ್ಮಾ ತಂದೆಯ ಜೊತೆ ಜೊತೆಯಾಗಿ ಮನೆಗೆ ಹೋಗುತ್ತಿದ್ದೇನೆ.

11. ನಾನು ಬ್ರಹ್ಮಾ ತಂದೆಯ ಜೊತೆ ಹೋಗಿ ಬ್ರಹ್ಮಾ ತಂದೆಯೊಂದಿಗೆ ಮೊದಲ ಜನ್ಮದ ಅಧಿಕಾರಿ ಆಗಿದ್ದೇನೆ.

12. ಸಮಯ, ಮಾಯೆ, ಪ್ರಕೃತಿ ಅತಿಗೆ ಹೋಗುತ್ತಿರುವ ಕಾರಣ ನಾನು ಸಹ ನನ್ನ ಮೇಲೆ ನಾನು ಅತಿಯಾದ ಗಮನ ಅರ್ಥಾತ್ ಮನಸಾ, ವಾಚಾ, ಕರ್ಮಣಾದಲ್ಲಿ ಅತಿಯಾಗಿ ಹೋಗುತ್ತಾ ತೀವ್ರ ಪುರುಷಾರ್ಥ ಮಾಡುತ್ತಿದ್ದೇನೆ.

13. ವಿಶ್ವ ಕಲ್ಯಾಣಕಾರಿ ಆತ್ಮನಾದ ನಾನು ಈಗ ವಿಶ್ವದ ಸರ್ವಾತ್ಮರಿಗೆ ಕಲ್ಯಾಣವನ್ನು ಮಾಡುತ್ತಿದ್ದೇನೆ.

14. ನಾನು ಸೇವೆಯ ಲಗನ್ನಿನಿಂದ ಎವರ್ ರೆಡಿಯಾಗಿದ್ದೇನೆ.

15. ನಾನು ಯಾವ ಸೇವೆಯನ್ನು ಮಾಡುವಾಗಲೂ (ಉಪನ್ಯಾಸವನ್ನು ಹೇಳುತ್ತಿರುವಾಗಲೂ) ಆತ್ಮಿಕ ಸ್ಥಿತಿಯಲ್ಲಿ ಸ್ಥಿತವಾಗಿ ಶಕ್ತಿ, ಶಾಂತಿ ಅಥವಾ ಪರಮಾತ್ಮನ ಪ್ರೀತಿಯ ವಿಶೇಷ ಅನುಭೂತಿಯನ್ನು ಮಾಡಿಸಿ ಮನಸ್ಸಿನಿಂದ ನನ್ನ ಆತ್ಮಿಕ ಸ್ಥಿತಿಯ ಪ್ರಭಾವವನ್ನು ವಾಯುಮಂಡಲದ ಮೇಲೆ ವ್ಯಾಪಿಸುತ್ತಿದ್ದೇನೆ.

16. ನಾನು ಉಪನ್ಯಾಸವನ್ನು ಹೇಳುವ ಸಮಯದಲ್ಲಿ ನನ್ನ ಮಾತಿನ ಮೂಲಕ, ಮಸ್ತಕದ ಮೂಲಕ, ನಯನಗಳ ಮೂಲಕ, ಮುಖದ ಮೂಲಕ ಆತ್ಮಿಕ ಸ್ಥಿತಿಯ ಅನುಭೂತಿಯು ಇತರರಿಗೆ ಕಾಣಿಸುತ್ತಿದೆ.

17. ನಾನು ನನ್ನ ಶಾಂತಿಯ ಶಕ್ತಿಯ ಮೂಲಕ ಪ್ರೇಮ ಸ್ವರೂಪವನ್ನು, ಸುಖ ಸ್ವರೂಪವನ್ನು, ಶಾಂತಿ ಸ್ವರೂಪದ ವಾಯುಮಂಡಲವನ್ನು ಅನುಭವ ಮಾಡಿಸುತ್ತಾ ಸಮಾಪ್ತಿ ಸಮಯವನ್ನು ಸಮಾಪ್ತಿ ಮಾಡಿ ನನ್ನ ರಾಜ್ಯವನ್ನು ತರುತ್ತಿದ್ದೇನೆ.

18. ವಿಶ್ವಕಲ್ಯಾಣಕಾರಿಯಾದ ನಾನು ದೃಷ್ಟಿಯ ಮೂಲಕ ಅನುಭೂತಿ, ಆತ್ಮಿಕ ಸ್ಥಿತಿಯ ಪ್ರಭಾವದ ಮೂಲಕ ದುಃಖಮಯ ಪ್ರಪಂಚವನ್ನು ಸುಖಮಯ ಪ್ರಪಂಚವಾಗಿ ಸೇವೆ ಮಾಡುವ ದಯಾಹೃದಯಿಯಾಗಿದ್ದೇನೆ.

19. ನನ್ನ ಮನಸ್ಸಿನಲ್ಲಿ, ವಾಚದಲ್ಲಿ,  ಸಂಬಂಧ ಸಂಪರ್ಕ ಎಲ್ಲದರಲ್ಲಿಯೂ ನಿರ್ಮಾಣತೆ ಇದೆ.

20. ನಾನು ನನ್ನ ಮಾತಿನಲ್ಲಿ, ನಡವಳಿಕೆಯಲ್ಲಿ, ಸಂಬಂಧ ಸಂಪರ್ಕಗಳಲ್ಲಿ, ಸೇವೆಯಲ್ಲಿಯೂ ಇತರರೊಂದಿಗೆ ನಿರ್ಮಾಣ ಸ್ವಭಾವದಿಂದ ಇರುತ್ತಾ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೇನೆ.

21. ಮುತ್ತುಗಳನ್ನು ನಮಗೆ ಹೇಳಿರಿ ಎಂದು ಎಲ್ಲರೂ ಕೇಳುವಂತೆ ನಾನು ಮಾತನಾಡುತ್ತಿದ್ದೇನೆ.

22. ನಾನು ಯಾವುದಾದರೂ ವ್ಯರ್ಥ ವಿಷಯಕ್ಕೆ, ವಿರುದ್ಧ ವಿಷಯಕ್ಕೆ, ಗತಿಸಿ ಹೋದ ವಿಷಯಕ್ಕೆ ಮನಸ್ಸಿನಿಂದ ಬಿಂದು ವಿಡುತ್ತಿದ್ದೇನೆ.

23. ಜ್ಞಾನದ ವಿಷಯಗಳ ಮೂಲಕ, ಧಾರಣೆಯ ಪಾಯಿಂಟ್ಸ್ ನ ಮೂಲಕ ವ್ಯರ್ಥ ವಿಷಯ ಎಂಬ ರಾವಣನನ್ನು ಕೊಂದು ಯೋಗಾಗ್ನಿಯಲ್ಲಿ ಸ್ವಾಹ ಮಾಡಿದ್ದೇನೆ.

24. ನನ್ನಲ್ಲಿರುವ ಲೋಪಗಳಿಗೆ ಮುಕ್ತಿಯನ್ನು ಕೊಟ್ಟು ತಂದೆಯ ಜೊತೆ ಮುಕ್ತಿ ಧಾಮಕ್ಕೆ ಹೋಗುತ್ತಿದ್ದೇನೆ.

25. ನನ್ನನ್ನು ನಾನು ಮುಕ್ತಿ ಮಾಡಿಕೊಂಡು ನನ್ನ ಸಹೋದರ ಸಹೋದರಿಯರನ್ನು ದುಃಖದಿಂದ ದೂರ ಮಾಡಿದ್ದೇನೆ.